–: ಯೋಜನೆ ಶೀರ್ಷಿಕೆ :–

**Hindustani Classical Music AWARENESS AND MOTIVATION IN RURAL AREAS UNKALL, BAIRIDEVARKOPPA, GAMANGATTI**

# ಗ್ರಾಮೀಣ ಪ್ರದೇಶದಲ್ಲಿ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಅರಿವು ಮತ್ತು ಪ್ರೇರಣೆ

ಆಯ್ದುಕೊಂಡ ಹಳ್ಳಿಗಳು :

**1) ಉಣಕಲ್ 2) ಭೈರಿದೇವರಕೊಪ್ಪ 3) ಗಾಮನಗಟ್ಟಿ**

**ಸಾರಲೇಖ :** ಗ್ರಾಮೀಣ ಜನಾಂಗವು ಬಹು ಹಿಂದಿನಿಂದಲೂ ಸಂಗೀತದ ಆರಾಧನೆ ಮಾಡುತ್ತ ಬಂದಿದೆ. ಅದರಲ್ಲೂ ಗ್ರಾಮೀಣ ಜನರು ಹಬ್ಬ ಹರಿದಿನಗಳಲ್ಲಿ ಇಂದಿಗೂ ಕುಣಿದು ಕುಪ್ಪಳಿಸಿ ಜಾನಪದ ಹಾಡುಗಳನ್ನು ಹಾಡುತ್ತ ಸಂಭ್ರಮಿಸುವುದನ್ನು ನಾವು ನೋಡುತ್ತೇವೆ.

ಹಳ್ಳಿಗರು ಆಶು ಕವಿಗಳು, ಸುಗ್ಗಿಯ ಸಮಯದಲ್ಲಿ ಬೆಳೆಗಳನ್ನು ನೋಡುತ್ತ, ಆನಂದದಿಂದ ತಮ್ಮ ಆಡು ಭಾಷೆಯಲ್ಲಿ ಹಾಡುಗಳನ್ನು ಕಟ್ಟಿ ಹಾಡುತ್ತಾರೆ ಜೊತೆಗೆ ಜನಪದ ವಾದ್ಯಗಳಾದ ಡಬ್ಬ, ಜಾಗಟೆ, ತಾಳ, ಡಗ್ಗಾ, ಏಕತಾರಿ ಬಳಸುತ್ತಾರೆ. ತಮಗೆ ಗೊತ್ತಿಲ್ಲದೇ ಅನೇಕ ರಾಗಗಳನ್ನು ತಾವು ಹಾಡುವ ಹಾಡುಗಳಲ್ಲಿ ಅಳವಡಿಸಿರುವುದು ಕಂಡು ಬರುತ್ತದೆ.

ಉದಾಹರಣೆಗಾಗಿ : ಪಹಾಡಿ, ಪಿಲೂ, ಯಮನ, ಕಾಫಿ, ಭೈರವಿ ರಾಗಗಳಲ್ಲಿ ಬಹಳಷ್ಟು ಹಾಡುಗಳಿವೆ. ಈ ಸೃಜನಶೀಲತೆಯಿಂದಾಗಿ ಇಂದಿಗೂ ಜನಪದರು ಎಲ್ಲರ ಹೃದಯವನ್ನು ಸರಳ ಧಾಟಿಗಳಿಂದ ಗೆಲ್ಲುತ್ತಿದ್ದಾರೆ. ಹಳ್ಳಿಗರಿಗೆ ಜಾನಪದ ಸಂಗೀತವನ್ನು ಬಿಟ್ಟರೆ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದ ಅರಿವು ಇರುವದಿಲ್ಲ. ಈ ದಿಸೆಯಲ್ಲಿ ಅವರಿಗೆ ಶಾಸ್ತ್ರೀಯ ಸಂಗೀತದ ಪ್ರೇರಣೆಯನ್ನುಂಟು ಮಾಡಲು ಹಿರಿಯ ಶಾಸ್ತ್ರೀಯ ಸಂಗೀತಗಾರರು ಹಳ್ಳಿಗಳತ್ತ ಮುಖ ಮಾಡುವುದು ಇಂದಿನ ಅವಶ್ಯಕತೆಯಾಗಿದೆ. ಆಗಾಗ ಹಳ್ಳಿಗಳಿಗೆ ಹೋಗಿ ಅಲ್ಲಿರುವವರಿಗೆ

ತಮ್ಮ ಶಾಸ್ತ್ರೀಯ ಸಂಗೀತವನ್ನು ಹಾಡಿ ತೋರಿಸುವುದರಿಂದ ಹಳ್ಳಿಗರಿಗೆ ಶಾಸ್ತ್ರೀಯ ಸಂಗೀತ ಎಂದರೇನು ? ಸಂಗೀತದಲ್ಲಿರುವ ಸ್ವರಗಳೆಷ್ಟು ? ಲಯ ಎಂದರೇನು ? ಸ್ವರಬದ್ಧವಾಗಿ, ಲಯ ಬದ್ಧವಾಗಿ ಹಾಡುವದರಿಂದ ಆಗುವ ಪ್ರಯೋಜನಗಳೇನು ? ಎಂಬುದನ್ನು ಕುರಿತು ವಿವರಣೆ ನೀಡುವುದರಿಂದ ಅವರಿಗೆ ಶಾಸ್ತ್ರೀಯ ಸಂಗೀತ ಕಲಿಯಬೇಕೆಂಬ ಆಸಕ್ತಿಯುಂಟಾಗುತ್ತದೆ. ಸಂಗೀತ ಕಲಿತಾಗ ಹಾಡಿದ ಹಾಡುಗಳಿಗೂ ಸಂಗೀತ ಕಲಿಯದೇ ಹಾಡುವ ಹಾಡುಗಳಿಗೂ ಇರುವ ವ್ಯತ್ಯಾಸವನ್ನು ಅವರಿಗೆ ಮನದಟ್ಟು ಮಾಡಿದಾಗ ಹಳ್ಳಿಗರಿಗೆ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಮಹತ್ವವು ಗೊತ್ತಾಗುತ್ತದೆ. ಶಾಸ್ತ್ರೀಯ ಸಂಗೀತ ಕಲಿಯುವದರಿಂದ, ಕೇಳುವುದರಿಂದ ತಾವು ಹಾಡುವ ಹಾಡುಗಳಲ್ಲಿ ಮಾಧುರ್ಯತೆ ಹೆಚ್ಚಿ ಕೇಳುಗರಿಗೆ ಹೆಚ್ಚಿನ ಆನಂದವುಂಟಾಗುತ್ತದೆ.

ಈ ದಿಸೆಯಲ್ಲಿ ಕೇವಲ ಹಾಡುಗಾರಿಕೆ ಅಷ್ಟೇ ಅಲ್ಲದೇ ವಾದ್ಯ ಬಾರಿಸುವದರಲ್ಲೂ ಕೂಡ ಬದಲಾವಣೆ ಬರುತ್ತದೆ. ಯಾವ ಹಾಡಿಗೆ ಯಾವ ವಾದ್ಯ ಬಳಸಿಕೊಳ್ಳಬೇಕೆಂಬ ಜ್ಞಾನ ಶಾಸ್ತ್ರೀಯ ಸಂಗೀತವನ್ನು ಅಭ್ಯಾಸ ಮಾಡುವುದರಿಂದ ಬರುತ್ತದೆ.

ಹಳ್ಳಿಗಳಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ಅನೇಕ ಕಾರ್ಯಕ್ರಮಗಳನ್ನು ಮಾಡುತ್ತಿರುತ್ತಾರೆ, ಇದು ಒಳ್ಳೆಯ ಬೆಳವಣಿಗೆ ಜೊತೆಗೆ ವರ್ಷಕ್ಕೊಮ್ಮೆ ಹಳ್ಳಿಗಳಲ್ಲಿ ರಾಷ್ಟ್ರೀಯ ಸಂಗೀತ ಉತ್ಸವಗಳನ್ನು ಮಾಡುವುದರಿಂದ ರಾಷ್ಟ್ರದ ಹಿರಿಯ ಕಲಾವಿದರ ಕಲೆಯನ್ನು ಕೇಳುವ ಅವಕಾಶ ಸಿಗುತ್ತದೆ. ಇವರು ಪ್ರದರ್ಶನ ಮಾಡುವ ಕಲೆಯಿಂದ ಅವರು ಸಾಕಷ್ಟು ಪ್ರೇರಣೆಯನ್ನು ಹೊಂದಬಹುದಾಗಿದೆ. ಸಂಗೀತದ ಶಕ್ತಿಯು ಅಪಾರವಾಗಿದ್ದು, ಎಲ್ಲ ಜಾತಿ ಜನಾಂಗದವರನ್ನು ಒಂದು ಮಾಡಿ ರಾಷ್ಟ್ರೀಯ ಏಕತೆಯನ್ನು ತರುವಲ್ಲಿ ಸಂಗೀತವು ಒಂದು ಮಹತ್ವದ ಮೈಲುಗಲ್ಲಾಗುತ್ತದೆ ಎಂದರೆ ತಪ್ಪಾಗಲಿಕ್ಕಿಲ್ಲ.

ಇದಕ್ಕೆ ಕಲಾವಿದರ ಸಹಕಾರವೂ ಅಷ್ಟೇ ಮುಖ್ಯವಾಗಿದೆ. ನಿರಂತರ ಪ್ರಯತ್ನದಿಂದ ಮಾತ್ರ ಹಳ್ಳಿಗರನ್ನು ಶಾಸ್ತ್ರೀಯ ಸಂಗೀತದ ಕಡೆಗೆ ಸೆಳೆದುಕೊಳ್ಳಲು ಸಾಧ್ಯವಾಗುತ್ತದೆ.

ಈ ಕಿರು ಸಂಶೋಧನೆ ಒಂದು ಪ್ರಾಥಮಿಕ ಪ್ರಯತ್ನವಾಗಿದ್ದು, ಇದರಲ್ಲಿ ನಾನು ಕಂಡುಕೊಂಡಿದ್ದು ಹಳ್ಳಿಯ ಜನರು ಸಾಕಷ್ಟು ಸಂಗೀತದ ಒಲವನ್ನು ಹೊಂದಿದ್ದು ಸಂಗೀತ ಕಲಾವಿದರ ಬಗ್ಗೆ ಅಪಾರ ಪ್ರೀತಿ ಗೌರವವನ್ನು ಹೊಂದಿದ್ದಾರೆ. ನಾನು ಹೋದಾಗಲೆಲ್ಲ ಅತ್ಯಂತ ಕುತೂಹಲದಿಂದ ಮತ್ತು ಶಾಂತ ಚಿತ್ತದಿಂದ ಸಂಗೀತವನ್ನು ಆಲಿಸುತ್ತಿದ್ದರು, ಇದು ಅವರ ಶಾಸ್ತ್ರೀಯ ಸಂಗೀತದ ಬಗ್ಗೆ ಆಸಕ್ತಿಯನ್ನು ತೋರಿಸುತ್ತದೆ.

## ಹಳ್ಳಿಗಳಲ್ಲಿ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಅರಿವು ಮತ್ತು ಪ್ರೇರಣೆ

**ಉದ್ದೇಶಗಳು** (Obejctives) :

1) ಆಯ್ದುಕೊಂಡ ಹಳ್ಳಿಗಳಾದ ಉಣಕಲ್, ಭೈರಿದೇವರಕೊಪ್ಪ ಮತ್ತು ಗಾಮನಗಟ್ಟಿ ಗ್ರಾಮಗಳಿಗೆ ಭೇಟಿ ನೀಡುವುದು.

2) ಅಲ್ಲಿರುವ ಗುಡಿಗಳಲ್ಲಿ ಹಳ್ಳಿಗರಿಗೆ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಮತ್ತು ಶಾಸ್ತ್ರೀಯ ಸಂಗೀತ ಆಧಾರಿತ ಭಕ್ತಿ ಗೀತೆ, ತತ್ವಪದಗಳನ್ನು ಸ್ವತಃ ಹಾಡುವುದರ ಮೂಲಕ ಶಾಸ್ತ್ರೀಯ ಸಂಗೀತ ಕೇಳಲು ಪ್ರೇರಣೆ ನೀಡುವುದು.

3) ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಪ್ರಾಥಮಿಕ ಜ್ಞಾನವನ್ನು ಹೇಳುವುದು.

4) ಶಾಸ್ತ್ರೀಯ ಸಂಗೀತ ಕಲಿಯುವುದರಿಂದ ಆಗುವ ಪ್ರಯೋಜನಗಳ ಕುರಿತು ವಿವರಿಸುವುದು.

5) ಪ್ರಾಯೋಗಿಕವಾಗಿ ಕೆಲವು ರಾಗಗಳನ್ನು ಹಾಡಿ ತೋರಿಸುವುದು.

6) ಸಂಗೀತದ ಕುರಿತು ಅವರ ಪ್ರತಿಕ್ರಿಯೆಗಳನ್ನು ನಿರೀಕ್ಷಿಸುವುದು.

7) ಸಂಗೀತದಿಂದ ಶಾಂತಿ, ಸಂತೋಷ ಮತ್ತು ಏಕತೆಗೆ ಹೆಚ್ಚಿನ ಒತ್ತು ನೀಡುವುದು.

ಈ ಉದ್ದೇಶಗಳ ಈಡೇರಿಕೆಯಾಗಿದೆ.

ಉಣಕಲ್, ಭೈರಿದೇವರಕೊಪ್ಪ ಮತ್ತು ಗಾಮನಗಟ್ಟಿ ಗ್ರಾಮಗಳಿಗೆ ಈ ಎರಡು ವರ್ಷಕ್ಕೂ ಮೇಲ್ಪಟ್ಟ ಅವಧಿಯಲ್ಲಿ ಹಲವಾರು ಬಾರಿ ನಾನು ಭೇಟಿ ನೀಡಿ ಸಂಗೀತದ ಕಾರ್ಯಕ್ರಮಗಳನ್ನು ಹಾಗೂ ವಿವರಣೆಯನ್ನು ನೀಡಿರುತ್ತೇನೆ.

ಗ್ರಾಮಗಳಲ್ಲಿರುವ ಗುಡಿಗಳಲ್ಲಿ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತವನ್ನು ಹಾಡುವುದರ ಮೂಲಕ ಹಳ್ಳಿಗರಿಗೆ ಸಂಗೀತದ ಕುರಿತು ಅರಿವನ್ನು ಮೂಡಿಸಲಾಗಿದೆ. ಹಳ್ಳಿಗರಿಗೆ ಸಪ್ತಸ್ವರಗಳೆಂದರೇನು, ಸಂಗೀತವನ್ನು ಹೇಗೆ ಅಭ್ಯಾಸ ಮಾಡಬೇಕು, ತಾಳಬದ್ಧವಾಗಿ ಹೇಗೆ ಹಾಡಬೇಕು, ರಾಗಗಳ ಬಗ್ಗೆ ಪರಿಚಯ, ಮುಂತಾದವುಗಳ ಬಗ್ಗೆ ಪ್ರಾಥಮಿಕ ಜ್ಞಾನವನ್ನು ಹೇಳಲಾಗಿದೆ. ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ ಕಲಿಯುವದರಿಂದ ಆರ್ಥಿಕವಾಗಿ ಸ್ವಾವಲಂಬಿಯಾಗಬಹುದಾಗಿದೆ. ಕಾರ್ಯಕ್ರಮಗಳನ್ನು ಕೊಡುವ ಮೂಲಕ ಹಣ ಸಂಪಾದನೆ, ಕ್ಲಾಸು ತೆಗೆದುಕೊಳ್ಳುವುದರಿಂದ ಬರುವ ಹಣದಿಂದ ಮತ್ತು ಸರ್ಕಾರಿ ನೌಕರಿಗಳನ್ನು ಪಡೆದು ಸುಖಮಯ ಜೀವನ ನಡೆಸಬಹುದಾಗಿದೆ. ಹಳ್ಳಿಗಳಿಗೆ ಹೋದಾಗ ನಾನು ಹಾಡುವ ಮುಂಚೆ ರಾಗ ಯಮನ, ಭೂಪ ಮೊದಲಾದ ರಾಗಗಳ ಪರಿಚಯ ಮಾಡಿ ಹಾಡಿ ತೋರಿಸಿರುವೆನು. ಇದರಿಂದ ಅವರು ಅತ್ಯಂತ ಆಸಕ್ತಿಯಿಂದ ಕೇಳಿ ಹಾಡಿ ಮುಗಿದ ಮೇಳೆ ಚಪ್ಪಾಳೆ ತಟ್ಟಿ ಸಂಗೀತದ ಕುರಿತು ಒಳ್ಳೆಯ ಪ್ರತಿಕ್ರಿಯೆ ನೀಡಿ ಸಂಗೀತ ಕಲಿಯುವ ಕುರಿತು ಒಲವು ತೋರುತ್ತಿದ್ದುದು ಕಂಡು ಬಂದಿತು. ಜಾತಿ, ಮತ, ಪಂಥ ಎಂಬುದನ್ನು ಮರೆತು ಸಂಗೀತದಲ್ಲಿ ಎಲ್ಲರೂ ಒಂದು ಎನ್ನುವದು ವ್ಯಕ್ತವಾಗುತ್ತಿತ್ತು.

# ಸಂಶೋಧನಾ ಕಿರುಚಿತ್ರ

Research Short Note

ಇಂದಿಗೂ ಗ್ರಾಮೀಣ ಸಂಸ್ಕೃತಿ ಕಲೆಗಳೇ ನಮ್ಮ ದೇಶದ ಹಿರಿಮೆ ಗರಿಮೆಯನ್ನು ಎತ್ತಿ ತೋರಿಸುವ ಕೇಂದ್ರಬಿಂದುಗಳಾಗಿವೆ. ಈ ದಿಸೆಯಲ್ಲಿ ನಾನು ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದ ಅರಿವು ಗ್ರಾಮೀಣ ಭಾಗದಲ್ಲಿ ಸ್ವಲ್ಪಮಟ್ಟಿಗಾದರೂ ಅದರ ಕುರಿತು ಪರಿಚಯಿಸುವದು ಮತ್ತು ಗ್ರಾಮೀಣ ಜನರಿಗೆ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತವನ್ನು ಕಲಿಯಬೇಕೆನ್ನುವಂತೆ ಪ್ರೇರಣೆ ಮೂಡಿಸುವದೇ ಈ ಸಂಶೋಧನೆಯನ್ನು ಮಾಡಲು ನನಗೆ ಪ್ರೇರಣೆ ನೀಡಿದೆ. ಇಲ್ಲಿ ನಾನು ಹಳ್ಳಿಯ ಜನರಿಗೆ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದ ಕುರಿತು ಸಂಕ್ಷಿಪ್ತ ಮಾಹಿತಿಯುಳ್ಳ ಕರಪತ್ರಗಳನ್ನು ಹಂಚುವದರ ಮೂಲಕ ಅವರಿಗೆ ಅರಿವು ಮೂಡಿಸಿರುತ್ತೇನೆ ಮತ್ತು ಶಾಸ್ತ್ರೀಯ ಸಂಗೀತವನ್ನು ಹಾಡಿ ತೋರಿಸಿದ್ದೇನೆ ಶಾಸ್ತ್ರೀಯ ಸಂಗೀತ ಆಧಾರಿತ ಭಕ್ತಿ ಗೀತೆಗಳನ್ನು ತತ್ವಪದಗಳನ್ನು ಅವರಿಗೆ ಹಾಡಿತೋರಿಸಿ ಅವರಲ್ಲಿ ಆಸಕ್ತಿ ಮೂಡಿಸುವದು. ಸಂಗೀತದ ಕುರಿತು ವಿವರಣೆ ನೀಡಿ ಅವರಿಗೆ ಸಂಗೀತ ಕಲಿಯುವಂತೆ ಪ್ರೇರೆಪಿಸುವದು ಈ ಸಂಶೋಧನೆಯ ಕಿರು ಚಿತ್ರವಾಗಿದೆ.

* * * * *

# ಪರಿಚಯ

Introduction

ಹಿಂದುಸ್ತಾನಿ ಶಾಸ್ತ್ರೀಯ ಸಂಗೀತವು ಇಂದು ವಿಶ್ವದಲ್ಲೆಲ್ಲ ತನ್ನ ಶ್ರೋತೃಗಳನ್ನು ವಿಸ್ತರಿಸಿಕೊಂಡಿದೆ. ಆದರೆ ಹೆಚ್ಚಾಗಿ ಶಾಸ್ತ್ರೀಯ ಸಂಗೀತವನ್ನು ಕೇಳುವ ಶ್ರೋತೃಗಳು ಮತ್ತು ಕಾರ್ಯಕ್ರಮಗಳು ನಗರಗಳಲ್ಲಿ ಕೇಂದ್ರಿಕೃತವಾಗಿವೆ. ಹೀಗಾಗಿ ಹಳ್ಳಿಗಳ ಭಾಗದ ಜನರಿಗೆ ಈ ಶಾಸ್ತ್ರೀಯ ಸಂಗೀತವು ಅಷ್ಟಾಗಿ ತಿಳಿದಿಲ್ಲ. ಕಾರಣ ಜನಪ್ರೀಯ ಶಾಸ್ತ್ರೀಯ ಸಂಗೀತಗಾರರು ಪಟ್ಟಣಗಳಲ್ಲಿ ನೆಲೆಸಿದ್ದು ನಗರಗಳಲ್ಲೇ ಕಾರ್ಯಕ್ರಮಗಳನ್ನು ಕೊಡುತ್ತಿರುವುದು ಇದಕ್ಕೆ ಕಾರಣವಾಗಿದೆ ಮತ್ತು ಹಳ್ಳಿಗಳಲ್ಲಿ ಹೆಚ್ಚಾಗಿ ಪ್ರಚಲಿತವಿರುವ ಸಂಗೀತವೆಂದರೆ ಜಾನಪದ ಸಂಗೀತ. ಈ ಸಂಶೋಧನೆಯಲ್ಲಿ ಹಳ್ಳಿಗಳಿಗೆ ಮತ್ತು ಹಳ್ಳಿಯ ಜನರಿಗೆ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದ ಅಭಿರುಚಿ ಬೆಳೆಸುವದಾಗಿದೆ ಮತ್ತು ಇದೊಂದು ಕಿರು ಪ್ರಯತ್ನವಾಗಿದೆ.

* * * * *

ಅಧ್ಯಾಯಗಳು

# ಮೊದಲನೇ ವರ್ಷ

## ಅಧ್ಯಾಯ-1

## ಹಿಂದುಸ್ತಾನಿ ಸಂಗೀತ ಪರಂಪರೆ ಸ್ವರೂಪ ಹಾಗೂ ವ್ಯಾಪ್ತಿ

Hindustani Music Heritage and Scope of the Study

ಹಿಂದುಸ್ತಾನಿ ಸಂಗೀತವು ಭವ್ಯ ಪರಂಪರೆ ಮತ್ತು ಇತಿಹಾಸವನ್ನು ಹೊಂದಿದ್ದು, ಸಾವಿರಾರು ವರ್ಷಗಳಷ್ಟು ಪುರಾತನವಾಗಿದೆ. ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದ ವಿಕಾಸಕ್ಕೆ ಭದ್ರ ಬುನಾದಿಯನ್ನು ಹಾಕಿದವರು ಉಸ್ತಾದ್ ಅಮಿರ್ ಖುಸ್ರೊ, ಸ್ವಾಮಿ ಹರಿದಾಸ, ಪಂ. ತಾನಸೇನ್ ಮುಂತಾದ ಮಹಾನ್ ಕಲಾವಿದರು. ಮೊದಲು ದೃಪದ ಗಾಯನದಿಂದ ಆರಂಭವಾದ ಶಾಸ್ತ್ರೀಯ ಸಂಗೀತವು ಕ್ರಮೇಣ ರೂಪಾಂತರಗೊಂಡು ಖ್ಯಾಲ ಗಾಯನ ಶೈಲಿಯಾಗಿ ಇಂದು ಹೆಚ್ಚು ಜನಪ್ರೀಯವಾಗಿದೆ ಹಾಗು ವಿಶ್ವದಾದ್ಯಂತ ಈ ಪ್ರಕಾರವನ್ನು ಹಾಡಲಾಗುತ್ತಿದೆ.

ಹಿಂದುಸ್ತಾನಿ ಶಾಸ್ತ್ರೀಯ ಸಂಗೀತವು ಜನಸಾಮಾನ್ಯರಿಗೆ ತಿಳಿಯಬೇಕೆಂದರೆ ಅವರಿಗೆ ಈ ಸಂಗೀತದ ಕುರಿತು ಕೇಳುವ ಸಂಸ್ಕಾರ ಅಗತ್ಯವಾಗಿದೆ. ಪಟ್ಟಣ ಪ್ರದೇಶಗಳಲ್ಲೇ ಹೆಚ್ಚಾಗಿ ಈ ಶಾಸ್ತ್ರೀಯ ಸಂಗೀತ ಕಛೇರಿಗಳು ಕೇಂದ್ರಿಕೃತವಾಗಿರುವದರಿಂದ ಹಳ್ಳಿಯ ಜನರು ಈ ಸಂಗೀತದಿಂದ ವಂಚಿತರಾಗುತ್ತಾರೆ ಮತ್ತು ತಮಗೆ ಪ್ರೀಯವೆನಿಸಿದ ಜನಪದ ಸಂಗೀತವನ್ನೇ ಅವರು ಇಷ್ಟಪಡುತ್ತಾರೆ. ಇದಕ್ಕಾಗಿಯೇ ನಾನು ಮೂರು ಹಳ್ಳಿಗಳನ್ನು ಆಯ್ಕೆಮಾಡಿಕೊಂಡು ಅವರಿಗೆ ನಾನು ಸ್ವತಃ ಶಾಸ್ತ್ರೀಯ ಸಂಗೀತ ಹಾಡಿ ಅದರ ಜೊತೆ ಜೊತೆಗೆ ಜಾನಪದ, ಭಕ್ತಿಗೀತೆ, ತತ್ವಪದಗಳನ್ನು ಶಾಸ್ತ್ರೀಯ ರಾಗಗಳ ಅಧಾರ ಇಟ್ಟುಕೊಂಡು ಹಾಡುವದರ ಮೂಲಕ ಅವರನ್ನು ಈ

ಶಾಸ್ತ್ರೀಯ ಸಂಗೀತದ ಕಡೆಗೆ ಆಕರ್ಷಿತರಾಗುವಂತೆ ಮಾಡುತ್ತಿದ್ದೇನೆ ಜೊತೆಗೆ ಈ ಶಾಸ್ತ್ರೀಯ ಸಂಗೀತದ ಕುರಿತು ರಾಗಗಳ ಕುರಿತು ತಾಳಗಳ ಕುರಿತು ಅವರಿಗೆ ವಿವರಣೆ ನೀಡುತ್ತಿದ್ದೇನೆ. ಕ್ರಮೇಣ ಅವರು ಈ ಶಾಸ್ತ್ರೀಯ ಸಂಗೀತದ ಆಳ ಅಗಲದ ಕುರಿತು ತಿಳಿದುಕೊಂಡು ಅದರ ಆನಂದವನ್ನು ಅನುಭವಿಸುತ್ತಿರುವದು ನನಗೆ ಅತೀವ ಸಂತಸವನ್ನುಂಟುಮಾಡುತ್ತಿದೆ.

ನನ್ನ ಜೊತೆಯಾಗಿ ಹಾಗೂ ತಬಲಾ ಸಾಥಿದಾರರಾಗಿ ಶ್ರೀ ನಾಗಲಿಂಗ ಮುರಗಿ ಅಂಗವಿಕಲನಾಗಿದ್ದರೂ ತಬಲಾ ಸಾಥಿ ನೀಡುವದಕ್ಕೆ ನನ್ನ ಜೊತೆ ಹಳ್ಳಿಗಳಿಗೆ ಬರುತ್ತಿದ್ದರು. ಅವರ ಸಂಗೀತ ಪ್ರೇಮಕ್ಕೆ ಮತ್ತು ತಬಲಾ ಪ್ರತಿಭೆ ಕಂಡು ಹಳ್ಳಿಗರೂ ಮಾರುಹೋಗಿದ್ದಾರೆ. ಇವರು ತಬಲಾ ವಿಷಯದ ಮೇಲೆ ಪಿಎಚ್‌ಡಿ ಮಾಡುತ್ತಿದ್ದಾರೆ. ಒಳ್ಳೆಯ ಪ್ರತಿಭಾವಂತ ಕಲಾವಿದರಾಗಿ ಧ್ವನಿವರ್ಧಕ ತಜ್ಞರೂ ಕೂಡ ಆಗಿದ್ದಾರೆ. ಹಿಂದುಸ್ತಾನಿ ಶಾಸ್ತ್ರೀಯ ಸಂಗೀತವು ಒಂದು ಶ್ರೇಷ್ಠ ಕಲೆಯಾಗಿದ್ದು, ಇಂದು ವಿಶ್ವಮಾನ್ಯತೆಯನ್ನು ಪಡೆದುಕೊಂಡಿದೆ. ಇದು ಜನಪದ ಸಂಗೀತದಿಂದ ಪ್ರೇರಣೆ ಪಡೆದರೂ ಕೂಡ ಹಾಡುವ ಶೈಲಿಯಲ್ಲಿ ಒಂದು ಪ್ರತ್ಯೇಕ ಕಲೆಯಾಗಿ ಗುರುತಿಸಿಕೊಂಡಿದ್ದು, ತನ್ನದೇ ಆದ ವೈಶಿಷ್ಟತೆಗಳನ್ನು ಹೊಂದಿದೆ. ಇದು ಭವ್ಯ ಪರಂಪರೆಯನ್ನು ಹೊಂದಿದ್ದು ಅನೇಕ ಘರಾಣೆಗಳನ್ನು ಹೊಂದಿದೆ. ಅವುಗಳಲ್ಲಿ ಪ್ರಮುಖವಾಗಿ ಕಿರಾಣಾ, ಜೈಪುರ, ಆಗ್ರಾ, ಪಟಿಯಾಲಾ, ಗ್ವಾಲಿಯ ಘರಾಣೆಗಳು ಜನಪ್ರೀಯವಾಗಿವೆ.

ಕಿರಾಣಾ ಘರಾಣೆಯ ವೈಶಿಷ್ಟವೆಂದರೆ ಇದು ಮಧುರ ಆಲಾಪ ಪ್ರಧಾನ ಗಾಯಕಿಯಾಗಿದೆ ಹಾಗೂ ಈ ಘರಾಣೆಯಲ್ಲಿ ಸ್ವರಗಳನ್ನು ಭಾವಪೂರ್ಣವಾಗಿ ಹಚ್ಚುವದು ಮತ್ತು ಗಂಭೀರವಾಗಿ ಹಾಡುವದು ವಿಶೇಷವಾಗಿದೆ. ಈ ಘರಾಣೆಯಲ್ಲಿ ಸರಳ ರಾಗಗಳನ್ನು ಆಯ್ಕೆಮಾಡಿಕೊಂಡು ಸುಂದರವಾಗಿ ಪ್ರಸ್ತುತ ಪಡಿಸಲಾಗುತ್ತದೆ. ಅತಿ ವಿಲಂಬಿತ ಲಯದಲ್ಲಿ ಹಾಡುವದು ಈ ಗಾಯಕಿಯ ವಿಶೇಷವಾಗಿದೆ. ಈ ಘರಾಣೆಯಲ್ಲಿ ಅನೇಕ ಪ್ರಸಿದ್ಧ ಗಾಯಕರು ಆಗಿಹೋಗಿದ್ದಾರೆ. ಅವರಲ್ಲಿ ಪ್ರಮುಖವಾಗಿ ಪಂ. ಸವಾಯಿ ಗಂಧರ್ವ, ಉಸ್ತಾದ್ ಅಬ್ದುಲ್‌ಕರೀಂ ಖಾನ, ಪಂ. ಭೀಮಸೇನ ಜೋಶಿ, ಡಾ. ವಿದುಶಿ ಹೀರಾಬಾಯಿ ಬಡೊದೆಕರ, ಡಾ. ಗಂಗೂಬಾಯಿ ಹಾನಗಲ್, ಡಾ. ಪ್ರಭಾ

ಅತ್ರೆ, ಉಸ್ತಾದ್ ಫೀರೋಜ ದಸ್ತೂರ, ಪಂ. ಸಂಗಮೇಶ್ವರ ಗುರವ ಇನ್ನೂ ಮುಂತಾದವರು ಪ್ರಮುಖರಾಗಿದ್ದಾರೆ.

**ಜೈಪುರ ಘರಾಣೆ :**

ಜೈಪುರ ಘರಾಣೆಯ ಅತ್ಯಂತ ಕ್ಲಿಷ್ಟ ಹಾಗೂ ಕಠಿಣ ಗಾಯಕಿಯಿಂದ ಕೂಡಿದೆ. ಇದರಲ್ಲಿ ಜೋಡರಾಗಗಳನ್ನು ಅಪ್ರಚಲಿತ ರಾಗಗಳನ್ನು ಬಹಳ ಹಾಡುತ್ತಾರೆ ಮತ್ತು ಇದರಲ್ಲಿ ಛೋಟಾಖ್ಯಾಲನ್ನು ಹಾಡುವದು ವಿರಳವಾಗಿದೆ. ಮಧ್ಯ ಲಯದಲ್ಲಿ ಅದರಲ್ಲೂ ವಿಲಂಬಿತ ತೀನತಾಲದಲ್ಲಿ ಹಾಡುವದು ಹೆಚ್ಚಾಗಿ ಕಂಡುಬರುತ್ತದೆ. ಇದು ಲಯ ಅಂಗ ಪ್ರಧಾನ ಗಾಯಕಿಯಾಗಿದ್ದು, ಸ್ವರ ಮಾಧುರ್ಯದ ಜೊತೆಗೆ ಕ್ಲಿಷ್ಟ ಲಯಕಾರಿಯನ್ನು ಒಳಗೊಂಡಿದೆ. ಅಕರ್ಷಕವಾಗಿ ಸಮ್ಮಿಗೆ ಬರುವದು ಈ ಗಾಯಕಿಯ ವೈಶಿಷ್ಟವಾಗಿದೆ. ಇದಕ್ಕೆ ಕಠಿಣ ಪರಿಶ್ರಮ ಬೇಕಾಗುತ್ತದೆ. ಈ ಗಾಯಕಿಯನ್ನು ಹಾಡುವವರು ವಿರಳವಾಗಿದ್ದು ಅವರಲ್ಲಿ ಪ್ರಮುಖವಾಗಿರುವವರು ಉಸ್ತಾದ್ ಅಲ್ಲಾದಿಯಾಖಾನ್, ಉಸ್ತಾದ ಮಂಜಿಖಾನ, ಉಸ್ತಾದ ಬುರ್ಜಿಖಾನ್, ವಿಧೂಷಿ ಮೂಗುಬಾಯಿ ಕುರ್ಡೆಕರ, ವಿದೂಷಿ ಕೇಸರಬಾಯಿ ಕೇಳಕರ, ಡಾ. ಮಲ್ಲಿಕಾರ್ಜುನ ಮನ್ಸೂರ, ಪಂ. ನಿವೃತ್ತಿಬುವಾ ಸರ್‌ನಾಯಿಕ್, ಪಂ. ಪಂಚಾಕ್ಷರಸ್ವಾಮಿ ಮತ್ತಿಗಟ್ಟಿ, ಪಂ. ಸಿದ್ಧರಾಮ ಜಂಬಲದಿನ್ನಿ, ವಿದೂಷಿ ಕಿಶೋರಿ ಅಮೋಣಕರ ಇನ್ನೂ ಮುಂತಾದ ಕಲಾವಿದರು ಅತ್ಯಂತ ಜನಪ್ರೀಯರಾಗಿದ್ದಾರೆ. ಇವರು ಹಾಡುವ ರಾಗಗಳಲ್ಲಿ ಖಟ್, ಬಸಂತ, ಪರಜ, ಜಯತ ಕಲ್ಯಾಣ, ಮಾರವಾ, ಬಿಲಾವಲ ಸಂಪೂರ್ಣ ಮಾಲಕೌಂಸ, ಚೈತಶ್ರೀ, ಲಂಕಾದಹನ ಸಾರಂಗ, ಲಲಿತಾಗೌರಿ ವಿಶೇಷವಾಗಿವೆ.

**ಆಗ್ರಾ ಘರಾಣೆ :**

ಆಗ್ರಾ ಘರಾಣೆಯು ಪ್ರಾಚೀನ ಪರಂಪರೆಯನ್ನು ಹೊಂದಿದ್ದು, ಈ ಗಾಯಕಿಯು ಗಂಭೀರವಾಗಿದ್ದು ಖರ್ಜ ಧ್ವನಿಯಲ್ಲಿ ಹಾಡುವದು ಮತ್ತು ಲಯಕಾರಿ ಪ್ರಧಾನವಾಗಿ ರಾಗಗಳನ್ನು ವಿಸ್ತಾರ ಮಾಡುವದು. ವಿಶೇಷವಾಗಿದೆ. ಈ ಗಾಯಕಿಯಲ್ಲಿ ಕ್ಲಿಷ್ಟತಾನುಗಳು ಮತ್ತು ಕ್ಲಿಷ್ಟ ರಾಗಗಳನ್ನು ಅತ್ಯಂತ

ಮಧುರವಾಗಿ ಪ್ರಸ್ತುತಪಡಿಸಲಾಗುತ್ತದೆ ಮತ್ತು ಆಲಾಪದಲ್ಲಿ ನೊಂ ತೊಂ ಮಾಡುವ ಪದ್ಧತಿ ರೂಢಿಯಲ್ಲಿದೆ. ಮಧ್ಯಲಯದಲ್ಲಿ ಮಧುರ ಚೀಜುಗಳನ್ನು ಹಾಡುವದು ವೇಗಗತಿಯ ತಾನುಗಳನ್ನು ಹಾಡುವದು ಮೂರು ಸಪ್ತಕದಲ್ಲಿ ನಿರಾಯಾಸವಾಗಿ ಹಾಡುವದು ವಿಶೇಷವಾಗಿದೆ. ಈ ಘರಾಣೆಯಲ್ಲಿ ಬರುವ ಪ್ರಮುಖ ಗಾಯಕರೆಂದರೆ ಉಸ್ತಾದ್ ಪೈಯಾಜಖಾನ್, ಉಸ್ತಾದ್ ಲತಾಪತ್ ಹುಸೇನಖಾನ್, ವಿದೂಷಿ ಲಲಿತಾರಾವ್ ಇನ್ನೂ ಮುಂತಾದವರು.

**ಪಟಿಯಾಲಾ ಘರಾಣೆ :**

ಪಟಿಯಾಲಾ ಘರಾಣೆಯು ಪಂಜಾಬಿ ಶೈಲಿಯನ್ನು ಹೊಂದಿದ್ದು ಇದರಲ್ಲಿ ಅತ್ಯಂತ ಲೀಲಾಜಾಲವಾಗಿ ಅಲಂಕಾರಿಕವಾಗಿ ಖಟಕಾ ಮುರಕಿಯೊಂದಿಗೆ ಮಧುರ ಆಲಾಪನೆಮಾಡಲಾಗುತ್ತದೆ. ಭಾವ ಪ್ರಧಾನ ಆಲಾಪನೆ ಮಾಡಲಾಗುತ್ತದೆ. ಈ ಘರಾಣೆಯಲ್ಲಿ ಠುಮರಿಯನ್ನು ಅತ್ಯಂತ ಸುಂದರವಾಗಿ ಹಾಡುತ್ತಾರೆ. ಈ ಘರಾಣೆಯ ಮೇರು ಗಾಯಕರೆಂದರೆ ಉಸ್ತಾದ್ ಬಡೆ ಗುಲಾಂ ಅಲಿಖಾನ್, ಉಸ್ತಾದ್ ಬರಕತ ಅಲಿಖಾನ, ಉಸ್ತಾದ್ ಮುನವರ ಅಲಿಖಾನ್, ಪಂ. ಜಗದೀಶ ಪ್ರಸಾದ, ಪಂ. ಅಜಯ ಚಕ್ರವರ್ತಿ ಮುಂತಾದವರಿದ್ದಾರೆ.

**ಗ್ವಾಲಿಯರ ಘರಾಣಾ :**

ಗ್ರಾಲಿಯರ ಘರಾಣೆಯು ಪ್ರಾಚೀನ ಇತಿಹಾಸವನ್ನು ಹೊಂದಿದ್ದು, ಈ ಗಾಯಕಿಯಲ್ಲಿ ಅತ್ಯಂತ ಸರಳ ಆಲಾಪ ತಾನಗಳ ಪ್ರಯೋಗವಿರುತ್ತದೆ. ಬಂದೀಶನ್ನು ಅತ್ಯಂತ ಕಟ್ಟುನಿಟ್ಟಾಗಿ ಲಯದೊಂದಿಗೆ ಹಾಡುತ್ತಾರೆ. ಗಂಭೀರ ಗಾಯಕಿ ಇದಾಗಿದೆ. ಉಸ್ತಾದ್ ಹದುಹಸ್ಸುಖಾನ್, ಪಂ. ನೀಲಕಂಠಬುವಾ, ಪಂ. ಬಾಲಕೃಷ್ಣ ಬುವಾ ಇಚಲಕರಂಚಿಕರ, ಪಂ. ವಿಷ್ಣು ದಿಗಂಬರ ಫಲೂಸ್ಕರ, ಪಂ. ವಿಷ್ಣುನಾರಾಯಣ ಭಾತಖಾಂಡೆ, ಪೂಜ್ಯ ಪಂ. ಪಂಚಾಕ್ಷರ ಗವಾಯಿಗಳವರು, ಪೂಜ್ಯ ಪಂ. ಪುಟ್ಟರಾಜ ಕವಿ ಗವಾಯಿಗಳವರು, ಪಂ. ಕುಮಾರ ಗಂಧರ್ವ, ಪಂ. ಬಸವರಾಜ ರಾಜಗುರು ಇನ್ನು ಮುಂತಾದವರ ಹೆಸರುಗಳನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ.

ಹೀಗೆ ಅನೇಕ ಘರಾಣೆಗಳ ಭವ್ಯ ಪರಂಪರೆ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತಕ್ಕಿದೆ. ಈಗ ಆಧುನಿಕ ಕಾಲದಲ್ಲಿ ಯುವ ಗಾಯಕರು ಘರಾಣೆ ಪದ್ಧತಿಗೆ ಕಟ್ಟುನಿಟ್ಟಾಗಿ ಅಂಟಿಕೊಳ್ಳದೆ ಹೊಸವಿಚಾರಧಾರೆಯೊಂದಿಗೆ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ ಪ್ರಸ್ತುತಪಡಿಸುತ್ತಿರುವದು ಒಳ್ಳೆಯ ಬೆಳವಣಿಗೆಯಾಗಿದೆ. ಈ ವಿಚಾರಧಾರೆಯಿರುವ ಪ್ರಮುಖ ಗಾಯಕರೆಂದರೆ ಪಂ. ಕುಮಾರ ಗಂಧರ್ವ, ಪಂ. ಅಜಯ ಪೊಹಾನಕರ, ಪಂ. ವಸಂತರಾವ ದೇಶಪಾಂಡೆ, ವಿದೂಷಿ ಕಿಶೋರಿ ಅಮೋಣಕರ, ವಿದೂಷಿ ಪ್ರಭಾ ಅತ್ರೆ, ವಿದೂಷಿ ಪರವೀನ ಸುಲ್ತಾನಾ ಇವರನ್ನು ಹೆಸರಿಸಬಹುದಾಗಿದೆ.

ಇತ್ತೀಚಿನ ಬೆಳವಣಿಗೆಯಲ್ಲಿ ಎಲ್ಲ ಘರಾಣೆಗಳ ಒಳ್ಳೆಯ ಅಂಶಗಳನ್ನು ತಮ್ಮ ಗಾಯಕಿಯಲ್ಲಿ ಬಳಸಿಕೊಂಡು ಒಂದು ಶೈಲಿಯನ್ನು ಪ್ರಸ್ತುತ ಪಡಿಸುವದು, ತನ್ಮೂಲಕ ಸಹೃದಯಿ ಸಂಗೀತ ಶ್ರೋತೃಗಳಿಗೆ ಪ್ರೀಯವಾಗುವಂತೆ ಹಾಡುವದು ವಿಶೇಷವಾಗಿದೆ. ಇದನ್ನು ಶ್ರೋತೃಗಳು ಕೂಡಾ ಒಪ್ಪಕೊಳ್ಳುತ್ತಿದ್ದಾರೆ. ಹಿಂದುಸ್ತಾನಿ ಶಾಸ್ತ್ರೀಯ ಸಂಗೀತವು ಎಲ್ಲ ರಸಗಳ ರಸಪಾಕವಾಗಿದೆ. ಇದಕ್ಕಾಗಿ ಶಾಸ್ತ್ರೀಯ ಸಂಗೀತ ಹಾಡುವ ಕಲಾವಿದರು ದಿನಕ್ಕೆ 6–7 ತಾಸುಗಳಷ್ಟು ಸಂಗೀತ ಅಭ್ಯಾಸ ಮಾಡುವದು ಅನಿವಾರ್ಯ ಇಲ್ಲದೆ ಹೋದರೆ ಸಂಗೀತ ಸಿದ್ಧಿಯಾಗುವದಿಲ್ಲ ಜೊತೆಗೆ ದಿನಕ್ಕೆ 2–3 ತಾಸು ಶ್ರೇಷ್ಠ ಸಂಗೀತ ಕಲಾವಿದರ ಧ್ವನಿಸುರುಳಿ ಕೇಳುವದು ಅವಶ್ಯಕವಾಗಿದೆ. ಈ ದಿಸೆಯಲ್ಲಿ ರಾಜ್ಯಸರ್ಕಾರಗಳು ಮತ್ತು ಕೇಂದ್ರ ಸರ್ಕಾರ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತವನ್ನು ಕಲಿಯುವ ವಿದ್ಯಾರ್ಥಿಗಳಿಗಾಗಿ ಸಂಗೀತ ಮಹಾವಿದ್ಯಾಲಯಗಳನ್ನು, ಗುರುಕುಲಗಳನ್ನು ಕೇವಲ ಪಟ್ಟಣಕ್ಕೆ ಕೇಂದ್ರೀಕರಿಸದೆ ಗ್ರಾಮೀಣ ಪ್ರದೇಶದಲ್ಲಿ ಈ ಸಂಗೀತ ವಿದ್ಯಾಲಯಗಳನ್ನು ಸ್ಥಾಪಿಸಲು ಮುಂದಾಗಬೇಕಿದೆ. ಸಂಗೀತ ಕಲಿಯುವ ವಿದ್ಯಾರ್ಥಿಗಳಿಗೆ ಶುಲ್ಕ ರಿಯಾಯಿತಿಯನ್ನು ನೀಡಬೇಕಾಗಿದೆ. ಇದರಿಂದ ಹೆಚ್ಚು ಹೆಚ್ಚು ಗ್ರಾಮೀಣ ಪ್ರತಿಭೆಗಳು ಈ ಶಾಸ್ತ್ರೀಯ ಸಂಗೀತ ಕಲಿಯಲು ಅನುಕೂಲವಾಗುತ್ತದೆ. ಈ ಮೂಲಕ ದೇಶದ ಸಂಸ್ಕೃತಿಗೆ ಹಿರಿಮೆ–ಗರಿಮೆ ಹೆಚ್ಚಾಗುತ್ತದೆ.

ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದ ಸ್ವರೂಪವು ಅತ್ಯಂತ ಮಧುರ ಮತ್ತು ಆಧ್ಯಾತ್ಮಿಕ ಆಳ ವಿಸ್ತಾರವನ್ನು ಒಳಗೊಂಡಿದೆ. ಹಿಂದೆ ಋಷಿ–ಮುನಿಗಳು ತಪಸ್ಸನ್ನು ಮಾಡುವಾಗ ನಾದೋಪಾಸನೆಗೆ ಹೆಚ್ಚು ಪ್ರಾಧಾನ್ಯತೆ ನೀಡಿದ್ದರು. ನಾದಮಾಧುರ್ಯವು ಮನಸ್ಸಿನ ಏಕಾಗ್ರತೆಗೆ ಅತ್ಯಂತ ಸುಲಭಸಾಧನವಾಗಿದ್ದು, ದೇವೋಪಾಸನೆಗೂ ಸಮೀಪವಾಗಿದೆ ಹೀಗಾಗಿ ಋಷಿಗಳು ಉದಾತ್ ಅನುದಾತ್ ಸ್ವರಿತ ಎಂಬ ಸ್ವರಗಳ ಮೂಲಕ ಮಂತ್ರೋಚ್ಚಾರಣೆ ಮಾಡುತ್ತಿದ್ದರು. ಸಾಮವೇದದಲ್ಲಿ ಸಾಮಗಾನದ ಮೂಲಕ ತಮ್ಮ ಭಕ್ತಿಯನ್ನು ದೇವರಿಗೆ ಅರ್ಪಿಸುತ್ತಿದ್ದರು. ದೇವರ ಸ್ತುತಿಯಿರುವ ಸ್ತೋತ್ರಗಳನ್ನು ಸ್ವರಬದ್ಧವಾಗಿ ಲಯಬದ್ಧವಾಗಿ ಹಾಡುತ್ತಿದ್ದರು.

ಕಾಲಕಳೆದಂತೆ ಬಹಳಷ್ಟು ಜನರುಸೇರಿ ಭಜನೆಯೊಂದಿಗೆ ದೇವರ ಗುಡಿಯಲ್ಲಿ ದೇವರ ಹಾಡುಗಳನ್ನು ಹಾಡಹತ್ತಿದರು. ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದಲ್ಲಿ ಆಳಕ್ಕೆ ಹೋದಂತೆ ಅಲೌಕಿಕ ಅತೀಂದ್ರಿಯ ಅನುಭೂತಿ ಉಂಟಾಗಿ ದೇವ ಸಾಕ್ಷಾತ್ಕಾರವು ಸಾಧ್ಯವಾಗುತ್ತದೆ. ಆದರೆ ಇದು ಸಾಧ್ಯವಾಗಬೇಕಾದರೆ ನಿರಂತರ ಸಾಧನೆಯೊಂದೆ ಮಾರ್ಗವಾಗಿದೆ. ಸಾಧನೆಯಂದರೆ ದೋಷಗಳಿಂದ ಕೂಡಿದ ಸಾಧನಾ ಕ್ರಮದಿಂದ ಏನೂ ಪ್ರಯೋಜನವಾಗುವದಿಲ್ಲ. ಅದಕ್ಕಾಗಿ ಶ್ರೇಷ್ಠ ಗುರುವಿನ ಮಾರ್ಗದರ್ಶನ ಮತ್ತು ಗುರುಕುಲ ಪದ್ಧತಿಯಲ್ಲಿ ಗುರುಸೇವೆ ಮಾಡುತ್ತ ಭಕ್ತಿಯಿಂದ ಕಲಿತಾಗ ಮಾತ್ರ ಸಂಗೀತದಲ್ಲಿ ಉನ್ನತಮಟ್ಟ ಬರಲು ಸಾಧ್ಯವಾಗುತ್ತದೆ.

ಹಿಂದುಸ್ತಾನಿ ಶಾಸ್ತ್ರೀಯ ಸಂಗೀತವು ಸಿದ್ಧಿಸಬೇಕಾದರೆ ಸಂಗೀತ ಅಭ್ಯಾಸದ ಜೊತೆಗೆ ಪಂಡಿತೋತ್ತಮರ ಸಂಗೀತವನ್ನು ಕೇಳುವದು ಕೂಡ ಅಷ್ಟೇ ಮುಖ್ಯವಾಗಿದೆ. ಮೊದಲು ಸಂಗೀತವನ್ನು ಕೇಳಬೇಕಾದರೆ ಸಂಗೀತಗಾರರ ಕಾರ್ಯಕ್ರಮಗಳಿದ್ದಲ್ಲಿ ದೂರದೂರ ಹೋಗಿ ಕೇಳಬೇಕಾಗುತ್ತಿತ್ತು. ಇಂದು ಆ ತೊಂದರೆ ಇಲ್ಲ ಈಗ ಮೋಬೈಲಿನಲ್ಲಿ ಸಂಗೀತವನ್ನು ಧ್ವನಿಮುದ್ರಿಸಿಕೊಂಡು ಕೇಳಬಹುದಾಗಿದೆ. ವಿಡಿಯೋ ಮೂಲಕ ಸಂಗೀತ ಕಾರ್ಯಕ್ರಮ ವಿಕ್ಷಿಸಬಹುದಾಗಿದೆ. ಟಿವಿ, ರೇಡಿಯೋಗಳಲ್ಲಿ ಶಾಸ್ತ್ರೀಯ ಸಂಗೀತ

ಬಿತ್ತರವಾಗುತ್ತಿದ್ದು ಅಲ್ಲಿಯೂ ಕೇಳಬಹುದಾಗಿದೆ. ಹೀಗೆ ಹೆಚ್ಚು ಹೆಚ್ಚು ಸಂಗೀತ ಕೇಳುವದರಿಂದ ಹೊಸ ಶೈಲಿಗಳು ಹೊಸ ಕಲ್ಪನೆಗಳು ಭಾವನಾ ಸಿರಿವಂತಿಕೆ ಸಂಗೀತ ಸಾಧಕನಲ್ಲಿ ಬರಲು ಸಾಧ್ಯವಾಗುತ್ತದೆ.

ಸಂಗೀತದ ಸಾಧನೆಗೆ ಇಂದು ಹಲವಾರು ಅನುಕೂಲತೆಗಳು ಇದ್ದು, ಪ್ರಾಥಮಿಕ ಶಾಲೆಗಳಲ್ಲಿ, ಮಾಧ್ಯಮಿಕ ಶಾಲೆಗಳಲ್ಲಿ ಪದವಿಪೂರ್ವ, ಪದವಿ ಸ್ನಾತಕೋತ್ತರ ಕೇಂದ್ರಗಳಲ್ಲಿ ಸಂಗೀತ ಒಂದು ಬೋಧನಾ ವಿಷಯವಾಗಿದ್ದು, ಪ್ರತಿಭಾವಂತ ವಿದ್ಯಾರ್ಥಿಗಳು ಇಲ್ಲಿ ಪ್ರವೇಶ ಪಡೆಯಬಹುದಾಗಿದೆ ಮತ್ತು ಸರ್ಕಾರಗಳು ಕೂಡ ಸಂಗೀತ ಕಲಿಯುವ ವಿದ್ಯಾರ್ಥಿಗಳಿಗಾಗಿ ವಿಶೇಷ ಮಾಸಿಕ ಸ್ಕಾಲರಶೀಫ್ ಕೊಡುವ ವ್ಯವಸ್ಥೆಮಾಡಿದೆ. ಟಿವಿ ಮಾಧ್ಯಮಗಳು ಕೂಡ ಸಂಗೀತ ಸ್ಪರ್ಧೆಗಳನ್ನೇರ್ಪಡಿಸಿ ದೊಡ್ಡ ಮೊತ್ತದ ಬಹುಮಾನಗಳನ್ನು ಕೊಡುತ್ತಿರುವದು ಸ್ವಾಗತಾರ್ಹ ಕ್ರಮವಾಗಿದೆ.

ಇಂದು ಸಂಗೀತವು ನಮ್ಮ ದೈನಂದಿನ ಜೀವನದ ಜೀವನಾಡಿಯಾಗಿದೆ ಎಂದರೆ ತಪ್ಪಾಗಲಿಕ್ಕಿಲ್ಲ. ಏಕೆಂದರೆ ಸಭೆ ಸಮಾರಂಭಗಳು ಸಂಗೀತದಿಂದಲೇ ಅರಂಭವಾಗುವದು  ವಿಶೇಷ.

ಇನ್ನು ಮದುವೆ, ಹುಟ್ಟುಹಬ್ಬ, ಧಾರ್ಮಿಕ ಕಾರ್ಯಕ್ರಮಗಳಲ್ಲಿ ಸಂಗೀತ ಕಾರ್ಯಕ್ರಮಗಳು ಹೆಚ್ಚಾಗಿ ಜರುಗುತ್ತಿವೆ. ಇನ್ನು ಹಳ್ಳಿಗಳಲ್ಲಿರುವ ಬಾಲ ಪ್ರತಿಭೆಗಳನ್ನು ಗುರುತಿಸುವ ಕಾರ್ಯ ಹೆಚ್ಚಾಗಬೇಕಿದೆ. ಮಠ–ಮಂದಿರಗಳಲ್ಲಿ ಆಗಾಗ ಸಂಗೀತ ಕಾರ್ಯಕ್ರಮಗಳು ಜರುಗುತ್ತಿದ್ದು, ಈ ಸಂಖ್ಯೆ ಇನ್ನು ಹೆಚ್ಚಾಗಬೇಕಿದೆ.

ಇಂದು ಹಿಂದುಸ್ತಾನಿ ಶಾಸ್ತ್ರೀಯ ಸಂಗೀತವು ವಿಶ್ವವ್ಯಾಪಿಯಾಗಿ ಬೆಳೆಯುತ್ತಿದ್ದು, ವಿಶ್ವದ ಅನೇಕ ದೇಶಗಳ ವಿಶ್ವವಿದ್ಯಾಲಯಗಳಲ್ಲಿ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತವನ್ನು ಬೋಧಿಸಲಾಗುತ್ತಿದೆ.

ಹಿಂದುಸ್ತಾನಿ ಸಂಗೀತವನ್ನು ತಾಯಿಯ ಗರ್ಭದಲ್ಲಿರುವ ಶಿಶುವಿಗೆ

ಕೇಳಿಸುವದರಿಂದ ಆ ಮಗು ಮುಂದೆ ಪ್ರತಿಭಾವಂತ ವಿದ್ಯಾರ್ಥಿಯಾಗುವದಲ್ಲದೆ ಸಂಗೀತದಲ್ಲಿ ಪ್ರಾವಿಣ್ಯತೆಯನ್ನು ಪಡೆಯುತ್ತಾನೆಂಬುದು ಸಾಬೀತಾಗಿದೆ. ಹಿಂದುಸ್ತಾನಿ ಶಾಸ್ತ್ರೀಯ ಸಂಗೀತವನ್ನು ಪ್ರತಿನಿತ್ಯ ಕೇಳುವದರಿಂದ ಮನಸ್ಸು ಉಲ್ಲಸಿತವಾಗಿ ಸದಾ ಸಂತೋಷದಿಂದಿರಲು ಸಾಧ್ಯವಾಗುತ್ತದೆ. ಆರೋಗ್ಯವರ್ಧನೆಯಾಗುತ್ತದೆ ಹಾಗೂ ಅನೇಕ ರೋಗಗಳು ಉಲ್ಬಣವಾಗದಂತೆ ಹತೋಟಿಯಲ್ಲಿಡಬಹುದು ಎಂಬುದನ್ನು ಸಂಶೋಧಕರು ಕಂಡುಕೊಂಡಿದ್ದಾರೆ. ಇನ್ನು ಸಂಗೀತವನ್ನು ಯೋಗವೆಂದು ಅಭ್ಯಾಸಮಾಡುತ್ತ ಹೋದಂತೆ ಸಂಗೀತವು ನಾದಯೋಗವಾಗಿ ಪರಿಣಮಿಸಿ ದೇವಸಾಕ್ಷಾತ್ಕಾರವನ್ನು ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದಿಂದ ಪಡೆಯಲು ಸಾಧ್ಯ. ಆದರೆ ಈ ಸ್ಥಿತಿ ತಲುಪಲು ಅಂತರಂಗ ಸಾಧನೆ ಬೇಕಾಗುವದು ಮುಖ್ಯವಾಗಿದೆ. ಸಂಗೀತವು ಅತೀಂದ್ರಿಯ ಅನುಭೂತಿಯಾಗಿದ್ದು ಈ ಸ್ಥಿತಿಯಲ್ಲಿ ನಾವು ಎಲ್ಲವನ್ನು ಮರೆತು ವಿಶ್ವಾತ್ಮನಲ್ಲಿ ಲೀನವಾಗುತ್ತೇವೆ ಇದು ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ ಸಾಧಕನ ಅತ್ಯುನ್ನತ ಸ್ಥಿತಿಯಾಗಿದ್ದು ಸಂಗೀತದಲ್ಲಿ ಸಿದ್ಧಿಯುಂಟಾದಾಗ ಇದು ಪ್ರಾಪ್ತಿಯಾಗುತ್ತದೆ.

ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದ ವ್ಯಾಪ್ತಿ ವಿಸ್ತಾರಗೊಳ್ಳುತ್ತಿದೆ. ಚಲನ ಚಿತ್ರಗಳಲ್ಲಿ ಈ ಸಂಗೀತವನ್ನು ಇಂದು ಹೆಚ್ಚಾಗಿ ಬಳಸಿಕೊಳ್ಳುತ್ತಿದ್ದಾರೆ. ಆಧುನಿಕ ಪೂರ್ವ ಸಂಗೀತದಲ್ಲಿ ಕೂಡ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದ ಬಳಕೆಯಾಗುತ್ತಿದೆ. ಅಸ್ಪತ್ರೆಗಳಲ್ಲಿ ರೋಗಿಗಳಿಗೆ ಈ ಸಂಗೀತವನ್ನು ಕೇಳಿಸುತ್ತಿದ್ದಾರೆ. ಹಿಂದುಸ್ತಾನಿ ಶಾಸ್ತ್ರೀಯ ಸಂಗೀತವನ್ನು ವಿವಿಧ ಬಗೆಯ ವಾದ್ಯಗಳೊಂದಿಗೆ ಕಚೇರಿ ನೀಡುತ್ತಿದ್ದಾರೆ. ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ ಮತ್ತು ಕರ್ನಾಟಕ ಸಂಗೀತದ ಜುಗಲಬಂದಿ ಕಾರ್ಯಕ್ರಮಗಳು ಕೂಡ ನಡೆಯುತ್ತಿವೆ. ವಿವಿಧ ದೇಶಗಳಿಗೆ ಇಂದು ಹಿಂದುಸ್ತಾನಿ ಶಾಸ್ತ್ರೀಯ ಸಂಗೀತಗಾರರನ್ನು ಆಮಂತ್ರಿಸುತ್ತಿದ್ದು, ಅಲ್ಲಿ ಕಚೇರಿಗಳನ್ನು ಏರ್ಪಾಡುಮಾಡಲಾಗುತ್ತಿದೆ. ಜೊತೆಗೆ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದ ಕುರಿತು ಉಪನ್ಯಾಸ ಮತ್ತು ಪ್ರಾತ್ಯಕ್ಷಕೆ ಕೂಡ ನಡೆಸಲಾಗುತ್ತದೆ. ಹಿಂದುಸ್ತಾನಿ

ಶಾಸ್ತ್ರೀಯ ಸಂಗೀತವು ದೇಶ, ಭಾಷೆ, ಜಾತಿ ಗಡಿಯನ್ನು ಮೀರಿ ಬೆಳೆದು ನಿಂತಿದ್ದು, ಎಲ್ಲರನ್ನು ಒಂದೆ ವೇದಿಕೆಯ ಮೇಲೆ ತನ್ನತ್ತ ಸೆಳೆದುಕೊಳ್ಳುತ್ತಿರುವದು ವಿಶೇಷವಾಗಿದೆ. ರಾಷ್ಟ್ರೀಯ ಏಕತೆಗಾಗಿ ಹಿಂದುಸ್ತಾನಿ ಸಂಗೀತವು ನೀಡುತ್ತಿರುವ ಕೊಡುಗೆಯು ಅನುಪಮವಾಗಿದೆ. ಹಿಂದುಸ್ತಾನಿ ಸಂಗೀತವು ಪ್ರೇಮ ಮತ್ತು ಶಾಂತಿಯ ಸಂದೇಶವಾಹಕವಾಗಿದೆ. ಈ ದಿಸೆಯಲ್ಲಿ ಸಂಗೀತಗಾರರು ಹಳ್ಳಿಗಳಲ್ಲಿ ಈ ಸಂಗೀತ ಕಚೇರಿಗಳನ್ನು ನಡೆಸಿದಲ್ಲಿ ಸಂಗೀತದಲ್ಲಿರುವ ಈ ಅನುಪಮ ಗುಣಗಳು ಎಲ್ಲರನ್ನು ತಲುಪುವಂತಾಗುತ್ತದೆ.

ಹಿಂದುಸ್ತಾನಿ ಶಾಸ್ತ್ರೀಯ ಸಂಗೀತವು ಒಂದು ಪ್ರತ್ಯೇಕ ಶೈಲಿಯಾಗಿ ರೂಪುಗೊಂಡಿದ್ದು, ತನ್ನದೇ ಆದ ಕೇಳುಗರನ್ನು ವಿಶ್ವಾದ್ಯಂತ ಹೊಂದಿದೆ. ಅದೆ ರೀತಿ ಜಾನಪದ ಸಂಗೀತವು ಕೂಡ ಒಂದು ಶೈಲಿಯಾಗಿದ್ದು, ಆಡುಭಾಷೆಯ ಸರಳ ಮಧುರ ಹಾಡುಗಾರಿಕೆಯಾಗಿದೆ. ಇದು ಯಾವುದೆ ರಾಗಗಳನ್ನು ಆಧಾರವಾಗಿಟ್ಟುಕೊಂಡು ಸಿದ್ಧಪಡಿಸಿದ ಸಂಗೀತವಾಗಿರದೇ ಹಾಡುಗಾರರು ತಮಗಿಷ್ಟವಾದಂತೆ ಹಾಡುವರು. ಇದು ಜಾನಪದ ಹಾಡುಗಾರಿಕೆಯ ವಿಶೇಷತೆಯಾಗಿದೆ. “ಜೊ ಜೋ ನನ್ನ ಜ್ಯೋತಿಯ ಕಂದಾ ಜೊ ಜೋ” ಎಂಬ ಜೋಗುಳ ಪದದಲ್ಲಿ ತಿಲಕ ಕಾಮೋದ ರಾಗವನ್ನು ಕಾಣಬಹುದಾಗಿದೆ. ಇದೇ ರಾಗವನ್ನು ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದಲ್ಲಿ ಕೂಡ ಹಾಡುತ್ತಾರೆ. ಅದರಂತೆ ಇನ್ನೊಂದು ಜಾನಪದ ಗೀತೆಯನ್ನು ಇಲ್ಲಿ ಉದಾಹರಿಸಬಹುದು. ಈ ಜಾನಪದ ಹಾಡಿನಲ್ಲಿ ಪಹಾಡಿರಾಗವಿದ್ದುದು ಕಂಡುಬರುತ್ತದೆ. ಆ ಹಾಡೆಂದರೆ “ನಾ ಬರ್ತಿನಿ ಹೊತ್ತ ಮುಳುಗುದಕ ಬುತ್ತಿ ತಗೊಂಡ ಹೋಗ್ತಿನಿ ಹೊಲಕ” ಈ ಹಾಡನ್ನು ಜಾನಪದ ರತ್ನಶ್ರೀ ಹುಕ್ಕೇರಿ ಬಾಳಪ್ಪನವರು ಜನಪ್ರೀಯಗೊಳಿಸಿದ್ದಾರೆ. ಇದರಂತೆ “ಮಲ್ಲಿಗಿ ಅರಳ್ಯಾವ ಅಂಗಳದಾಗ ಇಲ್ಲವ್ವಾ ರಾಯಾ ನಮ್ಮ ಮನಿಯಾಗ” ಎಂಬ ಜಾನಪದ ಗೀತೆಯು ಪಿಲು ರಾಗದಲ್ಲಿರುವದು ಕಂಡುಬರುತ್ತದೆ.

ಹೀಗೆ ಹಲವಾರು ರಾಗಗಳು ಪಹಾಡಿ, ಬೈರವಿ, ಬಿಹಾರಿ, ಕಾಫಿ, ಯಮನ, ಬಟಿಯಾರ, ಜೋಗಿಯಾ ಈ ರಾಗಗಳು ಜಾನಪದ ಗೀತೆಗಳಲ್ಲಿ

ಕೇಳಲು ಸಿಗುತ್ತವೆ. ಜಾನಪದ ಹಾಡುಗಳಿಂದ ಸ್ಫೂರ್ತಿ ಪಡೆದು ನನ್ನ ಗುರುಗಳಾದ ಪಂ. ಕುಮಾರ ಗಂಧರ್ವರು ತಮ್ಮ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದ ಹಾಡುಗಾರಿಕೆಯಲ್ಲಿ ಬದಲಾವಣೆ ತಂದು ದೊಡ್ಡ ಕ್ರಾಂತಿಯನ್ನೇ ಮಾಡಿದರು. ತಮ್ಮದೇ ಆದ ಈ ಶೈಲಿಯಿಂದ ಅವರು ಜಗದ್ವಿಖ್ಯಾತರಾದರು.

ಇತ್ತೀಚಿನ ಶೈಲಿಯಾದ ಫ್ಯೂಜನ ಸಂಗೀತದಲ್ಲಿ ಜಾನಪದ ಪಶ್ಚಿಮಾತ್ಯ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದ ಸಮ್ಮಿಲನವನ್ನು ಕಾಣಬಹುದಾಗಿದೆ. ಇದುಕೂಡ ಪ್ರಗತಿದಾಯಕ ಹೆಜ್ಜೆಯಾಗಿದೆ. ಹಳ್ಳಿಗಳಲ್ಲಿ ಹೆಚ್ಚಾಗಿ ಇಂದು ದೂರದರ್ಶನಗಳನ್ನು ಹಳ್ಳಿಗರು ನೋಡುತ್ತಿರುವದರಿಂದ ಜಾನಪದ ಸಂಗೀತದ ಜೊತೆಗೆ ಇತರ ಸಂಗೀತ ಶೈಲಿಗಳನ್ನು ಕೂಡ ಕೇಳುವ ಪ್ರತಿಭಾನ್ವಿತ ವಿದ್ಯಾರ್ಥಿಗಳು ನಮ್ಮ ಸಂಗೀತ ಮಹಾವಿದ್ಯಾಲಯಗಳಲ್ಲಿ ಪ್ರವೇಶ ಪಡೆಯುತ್ತಿರುವುದು ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದತ್ತ ಒಲವು ತೋರುತ್ತಿರುವದು ಆಶಾದಾಯಕ ಸಂಗತಿಯಾಗಿದೆ. ಅದರಲ್ಲಿ ಎಷ್ಟೋ ವಿದ್ಯಾರ್ಥಿಗಳು ರಾಜ್ಯಮಟ್ಟದ, ರಾಷ್ಟ್ರಮಟ್ಟದ ಸಾಧನೆಯನ್ನು ಮಾಡಿದ್ದಾರೆ.

ಜಾನಪದ ಸಂಗೀತವು ಹಲವು ವೈವಿಧ್ಯತೆಗಳಿಂದ ಕೂಡಿದ್ದು, ಆಯಾ ಪ್ರಾಂತ್ಯಗಳ, ಆಯಾ ರಾಜ್ಯಗಳ ಆಯಾ ಪ್ರದೇಶಗಳ ವೈಶಿಷ್ಟ್ಯತೆಗಳಿಂದ ಕೂಡಿದ್ದು ವಿವಿಧ ಭಾಷೆಗಳಲ್ಲಿ ಹಾಡಲಾಗುತ್ತಿದೆ. ಅದರೆ ಈ ಭಾಷೆಗಳು ಗ್ರಾಮ್ಯ ಭಾಷೆಯಾಗಿದ್ದು ಆಡು ಭಾಷೆಯಾಗಿರುತ್ತದೆ.

ಇಲ್ಲಿ ಗಮನಿಸಬೇಕಾದುದೆಂದರೆ, ಈ ಹಾಡುಗಳನ್ನು ಯಾವುದೇ ಪುಸ್ತಕದಲ್ಲಿ ಬರೆದು ಪ್ರಕಟಿಸಬೇಕೆಂದು ಬರೆಯಲಾಗುವದಿಲ್ಲ ತಮಗೆ ಸ್ಫೂರ್ತಿ ಉಂಟಾದಾಗ ಅಂದರೆ ಸುಗ್ಗಿಯ ಸಮಯದಲ್ಲಿ, ಮಳೆಗಾಲದಲ್ಲಿ, ಮಗು ಹುಟ್ಟಿದ ಸಂದರ್ಭದಲ್ಲಿ, ಮದುವೆಯಲ್ಲಿ, ಪಂಚಮಿಯಲ್ಲಿ, ಶ್ರಾವಣದಲ್ಲಿ, ದೀಪಾವಳಿಯಲ್ಲಿ, ಧಾರ್ಮಿಕ ಸಭೆ ಸಮಾರಂಭಗಳಲ್ಲಿ ತಮಗೆ ಸಂತೋಷ ಉಂಟಾದಾಗ ಹಳ್ಳಿಗರು ತಾವೇ ತಮಗೆ ತಿಳಿದ ರೀತಿಯಲ್ಲಿ ಹಾಡುಕಟ್ಟಿ ಅದಕ್ಕೆ ತಮ್ಮದೇ ಧಾಟಿ ಲಯದೊಂದಿಗೆ ಹಾಡಿ ಕುಣಿದು ಕುಪ್ಪಳಿಸುತ್ತಾರೆ.

ಈ ಸಂಗೀತಕ್ಕೆ ಶಾಸ್ತ್ರೀಯವಾಗಿ ಯಾವುದೇ ಚೌಕಟ್ಟು, ಕಟ್ಟಳೆಗಳು ಇರುವದಿಲ್ಲ. ಇದರಿಂದಾಗಿ ಇದು ಹೆಚ್ಚು ಜನಪ್ರೀಯತೆಯನ್ನು ಪಡೆದುಕೊಂಡಿದೆ.

ಹಿಂದುಸ್ತಾನಿ ಶಾಸ್ತ್ರೀಯ ಸಂಗೀತಕ್ಕೆ ಎಲ್ಲ ಶಾಸ್ತ್ರೀಯ ಕಟ್ಟಳೆಗಳಿದ್ದು ಆಯಾ ರಾಗ, ಸಮಯ, ಆರೋಹ, ಅವರೋಹ, ವಾದಿ, ಸಂವಾದಿ, ಸ್ಥಾಯಿ, ಅಂತರಾ, ಬಂದೀಶ್, ನಿರ್ಧಿಷ್ಟ ಮಾತ್ರೆಗಳ್ಳುಳ್ಳ ತಾಲಗಳು ರಾಗ, ಭಾವ ಹೀಗೆ ಹಲವಾರು ನಿಯಮಗಳು ಇಲ್ಲಿ ಇರುತ್ತವೆ ಹಾಗು ಹಾಡಲು ಧ್ವನಿ, ಸಂಸ್ಕಾರ ಮಾಡಿಕೊಳ್ಳುವದು ಅವಶ್ಯವಿರುತ್ತದೆ. ಆ ಮೇಲೆ ರಾಗ ಸಿದ್ಧಿಯಾಗಬೇಕಾದರೆ ಶ್ರೇಷ್ಠ ಗುರುಗಳ ಹತ್ತಿರ ಹತ್ತು ಹನ್ನೆರಡು ವರುಷ ಅಭ್ಯಾಸ ಮಾಡಬೇಕಾಗುತ್ತದೆ. ಹಾಗು ದಿನಾಲು ಏಳೆಂಟು ತಾಸುಗಳ ಕಠಿಣ ಅಭ್ಯಾಸವನ್ನು ಶಾಸ್ತ್ರೀಯ ಸಂಗೀತವನ್ನು ಕರಗತ ಮಾಡಿಕೊಳ್ಳಲು ಮಾಡಬೇಕಾಗುತ್ತದೆ. ಆಗ ಮಾತ್ರ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತವನ್ನು ಸರಿಯಾಗಿ ಹಾಡಲಿಕ್ಕೆ ಸಾಧ್ಯವಾಗುತ್ತದೆ. ಈ ಸಂಗೀತವನ್ನು ಕೇಳುವದಕ್ಕೆ ಕೂಡ ಅಭ್ಯಾಸ ಬೇಕಾಗುತ್ತದೆ. ಏಕೆಂದರೆ ರಾಗಗಳ ಸ್ವಭಾವ ರಸ, ಆರೋಹ, ಅವರೋಹಗಳ ಕನಿಷ್ಠ ಪರಿಚಯವಿರುವ ಶ್ರೋತ್ರುವಿಗೆ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದ ನೈಜ ಅನುಭವ ಆನಂದ ಕೇಳಿದಾಗ ಉಂಟಾಗುತ್ತದೆ.

ಶಾಸ್ತ್ರೀಯ ಸಂಗೀತವನ್ನು ಕೇಳಬೇಕಾದರೆ ಏಕಾಗ್ರತೆ ಬಹಳ ಬೇಕಾಗುತ್ತದೆ. ಎಷ್ಟೋ ಸಂಗೀತ ಸಭೆಗಳಲ್ಲಿ ಮಧ್ಯೆ ಮಧ್ಯೆ ಎದ್ದು ಹೋಗುವದು ಯಾವುದೋ ವಿಷಯುವನ್ನು ಚರ್ಚೆಮಾಡುವದು ಕಂಡು ಬರುತ್ತದೆ. ಇದರಿಂದ ಶಾಂತಚಿತ್ತದಿಂದ ಕೇಳವ ಇತರ ಶ್ರೋತ್ರುಗಳಿಗೆ ಸಂಗೀತದ ಆನಂದ ಪಡೆಯುವದಕ್ಕೆ ಧಕ್ಕೆ ಉಂಟಾಗುತ್ತದೆ. ಹೀಗಾಗಿ ಸಂಗೀತ ಕೇಳುವದಕ್ಕೂ ಕೂಡ ಶಿಸ್ತು, ಸಂಯಮದ ಅವಶ್ಯತೆ ಬಹಳಬೇಕು.

ಜಾನಪದ ಸಂಗೀತದಲ್ಲಿ ರಾಗಗಳು ಮಿಲಿತವಾದಾಗ್ಯೂ ಕೂಡ ಅಲ್ಲಿ ಪ್ರಧಾನವಾಗಿರುವದು ಸಾಹಿತ್ಯ ಮತ್ತು ಗಾಯಕಿಯಾಗಿರುವದರಿಂದ ಇಲ್ಲಿ ಕೇಳುವ ಶ್ರೋತ್ರುವಿಗೆ ಸಂಗೀತದ ಜ್ಞಾನವಿಲ್ಲವಾದರೂ ಕೂಡ ಜಾನಪದ

ಸಂಗೀತ ರುಚಿಸುತ್ತದೆ ಮತ್ತು ಜಾನಪದ ಸಂಗೀತಕ್ಕೆ ಯಾವ ಶಾಸ್ತ್ರದ ಸಂಕೋಲೆಗಳು ಇರುವದಿಲ್ಲ. ಸಮಯದ ಪರಿಮಿತಿ ಇರುವದಿಲ್ಲ ಹಾಗು ನಿರ್ಧಿಷ್ಟ ಧಾಟಿಯಿರುವದರಿಂದ ಅಲ್ಲಿ ಸ್ವತಂತ್ರ ರಾಗವಿಸ್ತಾರವಿರುವದಿಲ್ಲ. ಶಾಸ್ತ್ರೀಯ ಸಂಗೀತದಲ್ಲಿ ರಾಗ ವಿಸ್ತಾರವೇ ಪ್ರಾಧ್ಯಾನ್ಯವಾಗಿದ್ದು ಹೀಗಾಗಿ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತವು ಅಪರಂಪಾರ, ಅಪರಿಮಿತ, ಅತೀತದ ಅನುಭೂತಿಯನ್ನುಂಟುಮಾಡುತ್ತದೆ ಮತ್ತು ಪ್ರತಿಸಲ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದ ರಾಗಗಳು ರಾಗ ವಿಸ್ತಾರದಲ್ಲಿ ಹೊಸ ರೂಪಪಡೆದುಕೊಳ್ಳುತ್ತವೆ. ನಿತ್ಯನೂತನ ಎನಿಸುತ್ತವೆ ಇದೇ ಕಾರಣಕ್ಕಾಗಿ ನೂರಾರು ವರುಷಗಳಿಂದ ಅವೇ ರಾಗಗಳನ್ನು ಹಾಡಲಾಗುತ್ತಿದ್ದರೂ ಇಂದಿಗೂ ಕೇಳಬೇಕೆನಿಸುತ್ತದೆ. ರಾಗ ಸಂಗೀತ ಹಾಡುವಾಗ ಕಲ್ಪನಾ ಸಿರಿವಂತಿಕೆ ಬಹಳ ಅವಶ್ಯಕವಾಗುತ್ತದೆ. ಜೊತೆಗೆ ಅಕರ್ಷಕ ರೀತಿಯಲ್ಲಿ ಪ್ರಸ್ತುತ ಮಾಡುವದು ಒಂದು ಕಲೆಯಾಗಿದೆ.

ಇನ್ನು ಲಯದ ವಿಷಯಕ್ಕೆ ಬಂದಾಗ ಲಯದ ಅಡಿಪಾಯದ ಮೇಲೆಯೆ ರಾಗದ ಸೌಧ ನಿರ್ಮಾಣವಾಗುತ್ತದೆ. ಶಾಸ್ತ್ರೀಯ ಸಂಗೀತ ಕಲಾವಿದನಿಗೆ ಲಯದ ಖಚಿತ ಜ್ಞಾನ ಪಡೆಯುವದು ಅತ್ಯವಶ್ಯವಾಗಿದೆ. ಎಷ್ಟೋ ಕಲಾವಿದರು ರಾಗಾಭ್ಯಾಸಕ್ಕೆ ಹೆಚ್ಚು ಒತ್ತುನೀಡಿ ಲಯದ ಬಗ್ಗೆ ಅಷ್ಟೊಂದು ಮಹತ್ವ ನೀಡುವದಿಲ್ಲ. ಹೀಗಾಗಿ ಒಮ್ಮೊಮ್ಮೆ ಸಾರ್ವಜನಿಕ ಕಾರ್ಯಕ್ರಮದಲ್ಲಿ ಲಯಕ್ಕೆ ಬರದೇ ಕೇಳುಗರಿಗೆ ಬೇಸರವನ್ನುಂಟುಮಾಡುವದು ಕಂಡುಬರುತ್ತದೆ. ರಾಗ ನಿರ್ಮಾಣದಲ್ಲಿ ಲಯಗಾರಿಕೆಗೆ ವಿಶೇಷ ಮಹತ್ವವಿದೆ. ಬೇರೆ ಮಾತ್ರೆಗಳ ವಿಭಜನೆಮಾಡಿ ಬೋಲತಾನದೊಂದಿಗೆ ಲಯಕಾರಿ ಮಾಡುತ್ತ ಸಮ್ಮೆಗೆ ಬರುವದು ಚಿತ್ತಾಕರ್ಷಕವಾಗಿರುತ್ತದೆ. ಆದರೆ ಜಾನಪದ ಸಂಗೀತದಲ್ಲಿ ಅದರದೇ ಆದ ಪರಿಮಿತಿಗಳಿದ್ದು ಅಲ್ಲಿ ಧಾಟಿಯ ಪುನಾರಾವರ್ತನೆಯನ್ನು ಕಾಣಬಹುದು. ಬೇರೆ ಬೇರೆ ಧಾಟಿಯ ಬೇರೆ ಬೇರೆ ಲಯದ ಬೇರೆ ಬೇರೆ ಪ್ರಕಾರದ ಜಾನಪದ ವೈವಿದ್ಯದ ಸಿರಿವಂತಿಕೆ ಈ ಕಲೆಯಲ್ಲಿಯೂ ಇವೆ. ಇದು ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ದೇಶದಿಂದ ದೇಶಕ್ಕೆ ವಿಭಿನ್ನತೆಯನ್ನು ಪಡೆದುಕೊಳ್ಳುತ್ತ ಹೋಗುತ್ತದೆ. ಶಾಸ್ತ್ರೀಯ ಸಂಗೀತದಲ್ಲಿರುವ ಆಳ ಮತ್ತು

ಆಧ್ಯಾತ್ಮ ಕೇಳುಗರನ್ನು ದಿವ್ಯ ಶಾಂತಿಯ ಕಡೆಗೆ ಕೊಂಡೊಯ್ಯುತ್ತದೆ. ಇದು ಕೆಲವೇ ಕೆಲವು ಶ್ರೋತೃಗಳ ಸೊತ್ತಾಗದೇ ಹಳ್ಳಿಯ ಜನರೂ ಕೂಡ ಇದರಿಂದ ವಂಚಿತರಾಗದೇ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದ ದಿವ್ಯಾನುಭವವನ್ನು ಪಡೆಯುವಂತಾಗಬೇಕು. ಅದಕ್ಕಾಗಿ ಗ್ರಾಮಗಳಲ್ಲಿ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದ ಅರಿವು ಮೂಡಿಸುವಲ್ಲಿ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತಗಾರರ ಪಾತ್ರ ಹಿರಿದಾಗಿದೆ. ಈ ದಿಸೆಯಲ್ಲಿ ಎಲ್ಲ ಹಿರಿಯ ಸಂಗೀತಗಾರರು ಚಿಂತನೆಮಾಡಿ ಮುಂದೆ ಬಂದಲ್ಲಿ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತವು ಎಲ್ಲರ ಮನೆ ಮಾತಾಗಬಹುದಾಗಿದೆ. ಹಳ್ಳಿಯ ಜನರೂ ಕೂಡ ಈ ಸಂಗೀತದ ಸವಿಯನ್ನು ಆಸ್ವಾದಿಸಬಹುದಾಗಿದೆ.

ಈ ದಿಸೆಯಲ್ಲಿ ನಾನು ಬೈರಿದೇವರಕೊಪ್ಪ, ಉಣಕಲ್ ಮತ್ತು ಗಾಮನಗಟ್ಟಿ ಗ್ರಾಮಗಳಲ್ಲಿ ನಿರಂತರವಾಗಿ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ ಕಾರ್ಯಕ್ರಮಗಳನ್ನು ಕೊಡುವದರ ಜೊತೆಗೆ ಸಂಗೀತದ ಕುರಿತು ಮಾಹಿತಿ ನೀಡಿ ಅವರ ಜೊತೆ ಚರ್ಚಿಸಿದಾಗ ಆವರು ನನ್ನ ನಿರೀಕ್ಷೆಗೂ ಮೀರಿ ಸ್ಪಂಧಿಸಿದ್ದಾರೆ. ಎಷ್ಟೋ ಜನರು ತಮ್ಮ ಮಕ್ಕಳಿಗೆ ಶಾಸ್ತ್ರೀಯ ಕಲಿಸುವದಾಗಿ ತಿಳಿಸಿದ್ದಾರೆ. ಇನ್ನು ಕೆಲವರು ತಮಗಾದ ಆನಂದವನ್ನು ನನ್ನ ಮುಂದೆ ಹಂಚಿಕೊಂಡು ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದ ಅರಿವು ಮತ್ತು ಪ್ರೇರೆಪಿಸುವಿಕೆಯ ಈ ಕಾರ್ಯಕ್ರಮವನ್ನು ಸಂಶೋಧನೆಯನ್ನು ಮುಂದುವರೆಸಿ ಎಂದು ಹುರಿದುಂಬಿಸಿದ್ದಾರೆ. ಅವರ ಮುಗ್ಧ ಪ್ರೀತಿಯನ್ನು ಕಂಡು ನನಗೆ ಹಿಡಿಸಲಾರದಷ್ಟು ಆನಂದ ಉಂಟಾಗಿದೆ.

ಹಿಂದುಸ್ತಾನಿ ಶಾಸ್ತ್ರೀಯ ಸಂಗೀತವು ವಿಜ್ಞಾನವು ಆಗಿದೆ. ಶಾಸ್ತ್ರೀಯವಾಗಿದೆ ಮತ್ತು ಸಿಸ್ತಿನಿಂದ ಕೂಡಿದೆ. ಈ ಮೂರರ ತ್ರಿವೇಣಿ ಸಂಗಮವಾಗಿದ್ದರಿಂದಲೇ ಇಂದು ಈ ಸಂಗೀತವು ವಿಶ್ವಮಾನ್ಯತೆಯನ್ನು ಪಡೆದಿದೆ ಎಂದು ಹೇಳಬಹುದು. ಈ ಕುರಿತು ನಾನು ಆಯ್ದುಕೊಂಡ ಹಳ್ಳಿಗಳಾದ ಉಣಕಲ್, ಬೈರಿದೇವರಕೊಪ್ಪ ಮತ್ತು ಗಾಮನಗಟ್ಟಿ ಗ್ರಾಮಗಳಲ್ಲಿ ಶಾಸ್ತ್ರೀಯ ಸಂಗೀತ ಕುರಿತು ವಿವರವಾದ ಉಪನ್ಯಾಸ ಮತ್ತು ಪ್ರಾತ್ಯಕ್ಷಿಕೆಗಳನ್ನು ಕೊಡುವುದರೊಂದಿಗೆ ಗ್ರಾಮೀಣ ಜನರಿಗೆ ಶಾಸ್ತ್ರೀಯ ಸಂಗೀತದ ಕುರಿತು

ಆಸಕ್ತಿಮೂಡಿಸುವಲ್ಲಿ ಸ್ವಲ್ಪಮಟ್ಟಿಗಾದರು ಯಶಸ್ವಿಯಾಗಿದ್ದೇನೆ ಎಂದು ಹೇಳಬಹುದು.

ನಾನು ಹಳ್ಳಿಗಳಲ್ಲಿ ಕೊಟ್ಟ ಕಾರ್ಯಕ್ರಮಗಳಿಂದ ಕಂಡುಕೊಂಡಿದ್ದೇನೆಂದರೆ ಅವರಲ್ಲಿ ಶಾಸ್ತ್ರೀಯ ಸಂಗೀತ ಜ್ಞಾನವಿಲ್ಲದಿದ್ದಾಗಲೂ ಕೂಡ ಅದನ್ನು ಅನುಭವಿಸಿ ಆನಂದ ಪಡೆಯುವ ರೀತಿ ನನಗೆ ಅಚ್ಚರಿಯನ್ನು ಮೂಡಿಸಿತು. ಇದು ಸಂಗೀತದಲ್ಲಿರುವ ವಿಶಿಷ್ಟ ಗುಣವೆಂದೇ ಹೇಳಬೇಕು. ಸಂಗೀತವು ಯಾವುದೇ ಪ್ರಕಾರದ್ದು ಇರಲಿ ಯಾವುದೆ ಭಾಷೆಯಲ್ಲಿರಲಿ ಅದರಲ್ಲಿರುವ ಮಾಧುರ್ಯ ಮಾತ್ರ ಎಲ್ಲರಿಗೂ ಅರ್ಥವಾಗುತ್ತದೆ. ಎಲ್ಲರ ಹೃದಯವನ್ನು ತಲುಪುತ್ತದೆ ಎಂದೇ ಹೇಳಬೇಕು.

ಹಿಂದುಸ್ತಾನಿ ಸಂಗೀತದಲ್ಲಿ ರಂಜನೆಯೂ ಇದೆ. ಆಧ್ಯಾತ್ಮವೂ ಇದೆ. ವಿಜ್ಞಾನವೂ ಇದೆ. ರೋಗ ಗುಣಪಡಿಸುವ ಶಕ್ತಿಯೂ ಇದೆ. ಹೀಗಾಗಿ ವಿಶ್ವವ್ಯಾಪಿಯಾಗಿ ಎಲ್ಲರೂ ಎಲ್ಲ ವಯಸ್ಸಿನವರೂ ಈ ಸಂಗೀತವನ್ನು ಆರಾಧಿಸುತ್ತಾರೆ ಪ್ರತಿನಿತ್ಯ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತವನ್ನು ಕೇಳುವದನ್ನು ರೂಢಿಸಿಕೊಂಡರೆ ಜೀವನದ ಎಲ್ಲ ಕಷ್ಟಗಳು ದೂರಾಗಿ ಶಾಂತಿ ನೆಮ್ಮದಿ ಅರೋಗ್ಯವನ್ನುಪಡೆದುಕೊಳ್ಳಬಹುದು. ಈ ದಿಸೆಯಲ್ಲಿ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದ ಕುರಿತು ಹಳ್ಳಿಯ ಜನರಿಗೆ ಶ್ರೀಸಾಮಾನ್ಯರಿಗೆ ಅಗತ್ಯಮಾಹಿತಿ ಒದಗಿಸುವದು ಸಂಗೀತಗಾರರಿಗೆ ವೇದಿಕೆಗಳನ್ನು ಹಳ್ಳಿಗಳಲ್ಲಿ ಕಲ್ಪಿಸಿಕೊಡುವಲ್ಲಿ ಸರ್ಕಾರಗಳು ಸಾರ್ವಜನಿಕರು ಮುಂದೆಬಂದಲ್ಲಿ ಈ ಸಂಗೀತದ ಸಂಪೂರ್ಣ ಲಾಭ ಎಲ್ಲರಿಗೂ ಸಿಗುತ್ತದೆ. ಈ ದಿಸೆಯಲ್ಲಿ ಸಾಕಷ್ಟು ಸಂಶೋಧನೆಗಳಿಗೂ ಅವಕಾಶವಿದ್ದು ಈ ಕಿರು ಸಂಶೋಧನೆ ಅದರೊಲ್ಲೊಂದು ಭಾಗವಷ್ಟೇ ಸಂಗೀತದಲ್ಲಿರುವ ಸ್ವಾಭಾವಿಕ ಗುಣವೆಂದರೆ ಅದು ಆನಂದವನ್ನುಂಟು ಮಾಡುವದು ಹೀಗಾಗಿ ಅದು ಒಂದು ದೊಡ್ಡಕಲೆಯಾಗಿ ಬೆಳೆದಿದೆ. ಹೇಗೆ ನದಿಗಳು ಹಲವು ಆದರೂ ಕೊನೆಗೆ ಸೇರುವುದು ಸಮುದ್ರವನ್ನೆ ಎಂಬುವಂತೆ ರಾಗಗಳು ಹಲವಾದರೂ ಕೊನೆಗೆ ನಮ್ಮನ್ನೆಲ್ಲ ಕೊಂಡೊಯ್ಯುವದು ಆ ಸಂತೋಷದ ಸಾಗರಕ್ಕೆ ಎಂಬುದರಲ್ಲಿ ಎರಡು ಮಾತಿಲ್ಲ.

ಆದರೆ ರಾಗಸಿದ್ಧಿಯಾದಾಗಲೇ ಮಾತ್ರ ಆ ರಾಗದ ನೈಜ ಅನುಭವ ಶ್ರೋತೃವಿಗೆ ಆಗಲಿಕ್ಕೆ ಸಾಧ್ಯವಾಗುತ್ತದೆ. ಇದಕ್ಕಾಗಿ ದಿನಾಲು ರಾಗ ಶೋಧನೆ ಮಾಡಬೇಕಾಗುತ್ತದೆ. ರಾಗದ ಚಿತ್ರವನ್ನು ದಿನಾಲು ಹೊಸ ಸೌಂದರ್ಯದೊಂದಿಗೆ ಹೊಸ ದೃಷ್ಟಿಯೊಂದಿಗೆ ಮನಸ್ಸಿನಲ್ಲಿ ಮೂಡಿಸಿ ಸಾಧನೆಯಲ್ಲಿ ತೊಡಗಿಸಿಕೊಳ್ಳಬೇಕಾಗುತ್ತದೆ. ಇದಕ್ಕೆ ಕೊನೆಯೇ ಇಲ್ಲ ಇದು ನಿತ್ಯ ನಿರಂತರವಾಗಿದೆ.

ಸಂಗೀತಗಾರರ ಮೇಲೆ ಬಹಳ ಜವಾಬ್ದಾರಿಯಿದ್ದು ಈ ಸಾಧನೆಯಲ್ಲಿ ಮುಂದುವರೆದಿದ್ದಾದರೆ ಹಳ್ಳಿಹಳ್ಳಿಗೂ ಈ ಸಂಗೀತವನ್ನು ಪರಿಣಾಮಕಾರಿಯಾಗಿ ಮುಟ್ಟಿಸಬಹುದಾಗಿದೆ. ಇದಕ್ಕೆ ಸ್ವಯಂ ಸ್ಫೂರ್ತಿಯಿಂದ ಸಂಗೀತಗಾರರು ಮುಂದೆ ಬರುವದು ಅಷ್ಟೇ ಆವಶ್ಯವಾಗಿದೆ.

ಹಳ್ಳಿಗಳಲ್ಲಿ ಸಂಗೀತದಲ್ಲಿ ಆಸಕ್ತಿಯಿರುವ ಜನರು ತಮ್ಮದೇ ಆದ ಕಲಾಸಕ್ತರ ಸಂಘವೊಂದನ್ನು ರಚಿಸಿಕೊಂಡು ಒಂದು ವರ್ಷದಲ್ಲಿ ಎರಡು ಮೂರು ಬಾರಿ ಸಂಗೀತ ಉತ್ಸವಗಳನ್ನು ಹಬ್ಬಹರಿದಿನಗಳಲ್ಲಿ ಆಯೋಜಿಸಲು ಮುಂದೆ ಬಂದಲ್ಲಿ ಕಲಾವಿದರಿಗೆ ವೇದಿಕೆಯನ್ನು ಒದಗಿಸಿದಂತಾಗುತ್ತದೆ ಜೊತೆಗೆ ಎಲ್ಲರೂ ಉತ್ಸಾಹದಿಂದ ಪಾಲ್ಗೊಳ್ಳಲು ಅವಕಾಶ ಸಿಕ್ಕಂತಾಗುತ್ತದೆ ಇದರಿಂದ ಶಾಸ್ತ್ರೀಯ ಸಂಗೀತದ ಅಭಿರುಚಿ ಹಳ್ಳಿಗರಲ್ಲಿ ಮೂಡುತ್ತದೆ.

ಸಂಗೀತ ಪಾಠಶಾಲೆಗಳು ಹಳ್ಳಿಗಳಲ್ಲಿ ಪ್ರಾರಂಭವಾದಲ್ಲಿ ಅಲ್ಲಿರುವ ಸಂಗೀತ ಪ್ರತಿಭೆಗಳಿಗೆ ಒಳ್ಳೆಯ ಮಾರ್ಗದರ್ಶನ ಸಿಗುತ್ತದೆ. ಮಠ ಮಾನ್ಯಗಳು ಸರ್ಕಾರ ಮುಂದೆ ಬಂದು ಈ ಕಾರ್ಯಮಾಡಬೇಕು. ಸಂಗೀತ ಕೇಳುವದರಿಂದ ಹಾಡುವದರಿಂದ ಅನೇಕ ಪ್ರಯೋಜನಗಳಿದ್ದು ಮಾನಸಿಕ ಮತ್ತು ದೈಹಿಕ ಆರೋಗ್ಯವು ಸಾಕಷ್ಟು ಸುಧಾರಣೆಯಾಗುತ್ತದೆ.

ಸಂಗೀತದಲ್ಲಿರುವ ಇನ್ನೊಂದು ಮಹತ್ವದ ಸಂಗತಿಯಂದರೆ ಎಲ್ಲ ಜಾತಿ, ಮತ, ಪಂಥಗಳನ್ನು ಮೀರಿ ಮಾನವೀಯ ಪ್ರೇಮವನ್ನು ಬೆಳೆಸುವ ಅಮೂಲ್ಯ ಶಕ್ತಿಯನ್ನು ಪಡೆದಿದೆ. ಹೀಗಾಗಿ ಕೋಮು ಸೌಹಾರ್ಧತೆಯನ್ನು

ಕಾಪಾಡುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ದೇಶದ ಏಕತೆಯನ್ನು ಬಲಪಡಿಸುತ್ತದೆ. ಪ್ರಮುಖವಾಗಿ ಹಳ್ಳಿಗಳಲ್ಲಿ ಸಾಂಸ್ಕೃತಿಕ ಸಿರಿವಂತಿಕೆಯನ್ನು ಹೆಚ್ಚಿಸುವಲ್ಲಿ ದೇವಾಲಯಗಳ ಪಾತ್ರ ಹಿರಿದಾಗಿದೆ ಎಂದೇ ಹೇಳಬೇಕು. ನಾನು ಕೂಡ ನನ್ನ ಈ ಕಿರುಸಂಶೋಧನೆಗೆ ಬಳಸಿಕೊಂಡಿದ್ದು ಈ ದೇವಾಲಯಗಳನ್ನೇ ಏಕೆಂದರೆ ಸ್ವಾಭಾವಿಕವಾಗಿ ಜನರು ಸಾಯಂಕಾಲದವರೆಗೆ ದುಡಿದು ದೇವರ ಸಾನಿಧ್ಯದಲ್ಲಿ ಬಂದು ಭಕ್ತಿಗೀತೆಗಳ ಭಜನೆಗಳನ್ನು ಹಾಡುವದು ಇಂದಿಗೂ ಹಳ್ಳಿಗಳಲ್ಲಿ ರೂಢಿಯಲ್ಲಿದೆ. ಹೀಗಾಗಿ ನಾನು ದೇವಾಲಯದಲ್ಲಿ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತವನ್ನು ಹಾಡಲು ದೇವಾಲಯಗಳಿಗೆ ಹೋಗುತ್ತಿದ್ದೆ. ಅಲ್ಲಿ ಬರುವ ಜನರು ಆಸಕ್ತಿಯಿಂದ ಕುಳಿತು ಕೇಳುತ್ತಿದ್ದರು ಇದರ ಹೊರತಾಗಿ ಬೇರೆ ವೇದಿಕೆಗಳು ಹಳ್ಳಿಗಳಲ್ಲಿ ಸಿಗುವದಿಲ್ಲ. ನನ್ನ ಈ ಕಿರು ಸಂಶೋಧನಾ ವಿಷಯವಾದ ಹಿಂದುಸ್ತಾನಿ ಸಂಗೀತದ ಜಾಗೃತಿ ಮತ್ತು ಪ್ರೇರಣೆ ನೀಡುವಲ್ಲಿ ಈ ದೇವಾಲಯಗಳೇ ನನಗೆ ಪ್ರಮುಖ ಅವಕಾಶಗಳನ್ನು ಕಲ್ಪಿಸಿಕೊಟ್ಟಿದ್ದು ಎಂದರೆ ತಪ್ಪಾಗಲಿಕ್ಕಿಲ್ಲ ಮತ್ತು ಇದು ವಾಸ್ತವ ಸತ್ಯವಾಗಿದೆ.

ಆದರೆ ಇಂದು ದೇವಾಲಯಗಳು ಇಂದು ದೇವರ ಪೂಜೆಗೆ ಮಾತ್ರ ಸೀಮಿತಗೊಳ್ಳುತ್ತಿದ್ದು, ಹಳ್ಳಿಯ ಜನರಾಗಲಿ ಪಟ್ಟಣದ ಜನರಾಗಲಿ ತಮ್ಮ ಈ ವಿಚಾರಧಾರೆಯನ್ನು ಬದಲಿಸಿಕೊಳ್ಳುವದು ಇಂದು ಕಲಾ ಬೆಳವಣಿಗೆಗೆ ವೈಚಾರಿಕತೆಯ ವಿಕಾಸಕ್ಕೆ ಸಾಂಸ್ಕೃತಿಕ ಕೇಂದ್ರಗಳನ್ನಾಗಿ ಪರಿವರ್ತನೆ ಮಾಡಿದಲ್ಲಿ ದೇವರ ಪೂಜೆಯ ಜೊತೆಗೆ ಜನರಲ್ಲಿ ಕಲಾಸಕ್ತಿಗೆ ಜ್ಞಾನ ವಿಕಾಸಕ್ಕೆ ಒಂದು ಆಯಾಮವನ್ನು ಕೊಟ್ಟಂತಾಗುತ್ತದೆ. ಈ ಚಿಂತನೆ ಕಾರ್ಯರೂಪಕ್ಕೆ ಬರಬೇಕಾಗಿದೆ.

ಈ ಚಿಂತನೆಯನ್ನು ಪದ್ಮಭೂಷಣ ಡಾ॥ ಗಂಗೂಬಾಯಿ ಹಾನಗಲ್ ಅವರು ನಾನು ಅವರನ್ನು ಭೇಟಿಮಾಡಿದಾಗ ಮೇಲಿಂದ ಮೇಲೆ ಹೇಳುತ್ತಿದ್ದರು. ಕಲಾವಿದರು ದೇವಾಲಯಗಳಿಗೆ ಹೋಗಿ ಹಾಡಿರಿ ಅಲ್ಲಿ ಬರುವ ಜನರಿಗೆ ನಿಮ್ಮ ಹಾಡನ್ನು ಕೇಳಿಸುವದರಿಂದ ನಿಮಗೆ ದೇವರ ಆಶೀರ್ವಾದ ಜೊತೆಗೆ ಅಲ್ಲಿಗೆ ಬರುವ ಭಕ್ತರ ಆಶೀರ್ವಾದವೂ ಸಿಗುತ್ತದೆ. ನಿಮ್ಮ ಜನಪ್ರೀಯತೆಯೂ

ಹೆಚ್ಚಾಗುತ್ತದೆ. ಬರುವ ಭಕ್ತರಿಗೆ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದ ಕುರಿತು ಆಸಕ್ತಿಯೂ ಬೆಳೆಯುತ್ತದೆ ಎಂದು ಹೇಳುತ್ತಿದ್ದರು.

ದೇವಾಲಯಗಳಲ್ಲಿ ಹಿರಿಯ ಸಂಗೀತಗಾರರ ಶಾಸ್ತ್ರೀಯ ಸಂಗೀತದ ಧ್ವನಿ ಮುದ್ರಿಕೆಗಳನ್ನು ಬಿತ್ತಿರಿಸುವ ವ್ಯವಸ್ಥೆಯಾಗಬೇಕು. ಇದರಿಂದಲೂ ಕೂಡ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದ ಅಭಿರುಚಿ ಬೆಳೆಯುವದು. ಹೀಗೆ ಸಂಗೀತವನ್ನು ಕೇಳುವದರಿಂದ ಜನಸಾಮಾನ್ಯರ ಮನಸ್ಸು ಶಾಂತವಾಗಿ ಆರೋಗ್ಯವರ್ಧನೆಯಾಗುತ್ತದೆ. ಸಾಮಾಜಿಕ ಶಾಂತಿ ನೆಲೆಸುತ್ತದೆ. ಸಂಗೀತದಿಂದ ಕೋಪವನ್ನು ಹಿಡಿತಕ್ಕೆ ತರಬಹುದು. ತಾಳ್ಮೆ, ಸಹನೆಯಂತಹ ಒಳ್ಳೆಯ ಗುಣಗಳು ಬೆಳೆಯುವದಕ್ಕೆ ಸಂಗೀತ ಸಹಾಯಕಾರಿಯಾಗಿದೆ. ಶಾಸ್ತ್ರೀಯ ಸಂಗೀತದಿಂದ ಕೋಮು ಸೌಹಾರ್ಧತೆ ಉಂಟಾಗಿ ದೇಶದ ಏಕತೆಗೆ ಬಲಬರುತ್ತದೆ. ಈ ದಿಸೆಯಲ್ಲಿ ಸರ್ಕಾರ ಚಿಂತನೆ ನಡೆಸಿ ಶ್ರೇಷ್ಠ ಕಲಾವಿದರನ್ನು ಆಯ್ಕೆಮಾಡಿ ಈ ಕೆಲಸಕ್ಕೆ ನೇಮಕ ಮಾಡುವದು ಅವಶ್ಯಕವಾಗಿದೆ. ಹೀಗೆ ನೇಮಕ ಮಾಡಿದ ಕಲಾವಿದರಿಗೆ ಮಾಸಿಕ ವೇತನ ನಿಗದಿಪಡಿಸಿ ಪ್ರತಿ ತಿಂಗಳೂ ಒಂದೊಂದು ಹಳ್ಳಿಗೆ ಎರಡು ಮೂರು ಕಾರ್ಯಕ್ರಮ ಕೊಡುವಂತೆ ಕಡ್ಡಾಯಗೊಳಿಸಬೇಕು. ಈ ಮೂಲಕ ಹಳ್ಳಿಗರಲ್ಲಿ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದ ಅಭಿರುಚಿ ಹೆಚ್ಚಾಗುವಂತೆ ಮಾಡಬೇಕು.

ಅಧ್ಯಾಯ–2

# ಗ್ರಾಮೀಣ ಭಾಗದಲ್ಲಿ ಸಂಗೀತದ ಹಿನ್ನೆಲೆ

## Music Background in Rural Area

ಗ್ರಾಮೀಣ ಭಾಗದಲ್ಲಿ ಹೆಚ್ಚಾಗಿ ಕಂಡುಬರುವದು ಜಾನಪದ ಸಂಗೀತ, ಭಜನೆ, ಕರಡಿಮಜಲು, ಡಬ್ಬಿನಾಟ, ಬಯಲಾಟ ಮುಂತಾದ ಜಾನಪದ ಕಲೆಗಳು. ಈ ಎಲ್ಲ ಕಲೆಗಳಲ್ಲೂ ಸಂಗೀತವು ಹಾಸುಹೊಕ್ಕಾಗಿದೆ. ಈ ಸಂಗೀತಕ್ಕೆ ಯಾವುದೇ ಶಾಸ್ತ್ರೀಯ ಚೌಕಟ್ಟು ಇರುವದಿಲ್ಲ. ಇಲ್ಲಿ ಹಳ್ಳಿಗರು ಸುಗ್ಗಿಯ ಸಂದರ್ಭದಲ್ಲಿ ಹೊಲಗಳಲ್ಲಿ ಚೆನ್ನಾಗಿ ಫಸಲು ಬಂದಾಗ ತಮಗೆ ಸಂತೋಷವಾಗಿ ತಾವೇ ತಮ್ಮ ಆಡುಭಾಷೆಯಲ್ಲಿ ಹಾಡುಗಳನ್ನು ಕಟ್ಟಿ ತಮ್ಮದೇ ಧಾಟಿಯಲ್ಲಿ ಹಾಡುತ್ತಾರೆ.

ತಮ್ಮ ಊರಿನ ಜಾತ್ರೆ, ಹಬ್ಬ ಹರಿದಿನಗಳಲ್ಲಿ ಬಯಲಾಟ ನೃತ್ಯಮಾಡುತ್ತ ಕೋಲಾಟದ ಪದ ಹಾಡುವದು ಅವರಿಗೆ ರೂಢಿಗತವಾಗಿದೆ. ತಲೆತಲಾಂತರದಿಂದ ಬಂದ ಸಂಪ್ರದಾಯದ ಹಾಡುಗಳೇ ಅವರಿಗೆ ಪ್ರೇರಣೆಯಾಗಿದೆ. ಮದುವೆ, ಹಬ್ಬಗಳು, ತೊಟ್ಟಿಲು ಹಾಕುವ ಪ್ರಸಂಗ, ಸೀಮಂತ ಮುಂತಾದ ಸಂದರ್ಭದಲ್ಲಿ ಅವರು ಹಾಡುಕಟ್ಟಿ ಹಾಡುತ್ತಾರೆ. ಅವರಿಗೆ ರಾಗ ತಾಳಗಳ ಬಗ್ಗೆ ಅರಿವಿಲ್ಲದೇ ತಮ್ಮದೇ ಆದ ಲಯದಲ್ಲಿ ರಾಗಗಳಲ್ಲಿ ಚೆನ್ನಾಗಿಯೇ ಹಾಡುತ್ತಾರೆ ಆ ಹಾಡುಗಳು ಕೇಳಲಿಕ್ಕೆ ಬಹಳಷ್ಟು ಇಂಪಾಗಿ ಕೇಳುತ್ತವೆ. ಒಂದೊಂದು ಪ್ರದೇಶದಲ್ಲಿ ಒಂದೊಂದು ಶೈಲಿಯ ಹಾಡುಗಳು ಕೇಳಲಿಕ್ಕೆ ಸಿಗುತ್ತವೆ. ಇಲ್ಲಿ ಹಾಡುವಾಗ ಒಬ್ಬರೇ ಹಾಡುವದು ಕಡಿಮೆ ಗುಂಪು ಗುಂಪಾಗಿ ಹಾಡುವುದೇ ಹೆಚ್ಚು.

ಗ್ರಾಮಗಳಲ್ಲಿ ಭಜನಾ ಸಂಘಗಳಿದ್ದು, ತಮ್ಮ ಹೊಲದ ಕೆಲಸ ಮುಗಿಸಿಕೊಂಡು ಸಾಯಂಕಾಲ ಬಂದ ಮೇಲೆ ಗ್ರಾಮದೇವತೆಯ ಗುಡಿಯಲ್ಲಿ ಕುಳಿತು ಎರಡುತಾಸು ಭಜನೆ ಮಾಡುತ್ತಾರೆ. ವಿಶೇಷ ಸಮಾರಂಭಗಳಲ್ಲಿ ಭಜನೆಗಳನ್ನು ಹಾಡಿ ಜನರನ್ನು ರಂಜಿಸುತ್ತಾರೆ. ತಾವು ಸಂತೋಷ ಪಡುತ್ತಾರೆ. ಈ ರೀತಿ ಹಾಡುವ ಸಂಪ್ರದಾಯ ಹಳ್ಳಿಗಳಲ್ಲಿ ಕಂಡುಬರುತ್ತದೆ. ಇವರಿಗೆ ಇದೇ ಸಂಗೀತದ ಹಿನ್ನಲೆಯಾಗಿರುತ್ತದೆ.

## ಅಧ್ಯಾಯ – 3

# ಗ್ರಾಮೀಣ ಜನರಲ್ಲಿ ಸಂಗೀತದ ಅಭಿರುಚಿ

## Involvatment in Hindustani Classical Music by Rural People

ಗ್ರಾಮಗಳು ದೇಶದಾದ್ಯಂತ ಸಾಂಸ್ಕೃತಿಕವಾಗಿ ಅತ್ಯಂತ ಶ್ರೀಮಂತವಾಗಿವೆ. ಮುಖ್ಯವಾಗಿ ಗ್ರಾಮೀಣ ಕಲೆಗಳಾದ ಬಯಲಾಟ, ಕೊಲಾಟ, ಭಜನೆ, ಲಾವಣಿ, ಗೀಗಿಪದ, ಸುಗ್ಗಿಹಾಡು, ತತ್ವಪದ, ಸೋಬಾನಪದ, ಜೋಗುಳಹಾಡು, ವೀರಗಾಸೆ ಇನ್ನು ಹಲವಾರು ಜಾನಪದ ಪ್ರಕಾರದ ಹಾಡುಗಳಿದ್ದು, ಈ ಎಲ್ಲ ಹಾಡುಗಳನ್ನು ಗ್ರಾಮೀಣ ಜನರು ಹಾಡುವಲ್ಲಿ ನಿಷ್ಣಾತರಾಗಿದ್ದು ಒಳ್ಳೆಯ ಅಭಿರುಚಿಯನ್ನು ಹೊಂದಿದ್ದಾರೆ ತನ್ಮೂಲಕ ನಮ್ಮ ದೇಶದ ಸಾಂಸ್ಕೃತಿಕ ಸೊಬಗನ್ನು ಹೆಚ್ಚಿಸಿದ್ದಾರೆ.

ಭಾರತ ಸರಕಾರ ಹಾಗೂ ರಾಜ್ಯ ಸರಕಾರಗಳು ಜಾನಪದ ಕಲೆಗಳಿಗೆ ಹಾಗು ಕಲಾವಿದರಿಗೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಿದ್ದು, ಕಲಾವಿದರಿಗೆ ಕಾರ್ಯಕ್ರಮ ಕೊಡಲು ಆಹ್ವಾನಿಸುತ್ತಿದ್ದು, ಒಳ್ಳೆಯ ಸಂಭಾವನೆ ಕೊಡುತ್ತಿರುವುದು ಗ್ರಾಮೀಣ ಕಲಾವಿದರಲ್ಲಿ ಹೊಸ ಉತ್ಸಾಹವನ್ನು ತಂದಿದೆ. ಇದೊಂದು ಸದಭಿರುಚಿಯ ಬೆಳವಣಿಗೆಯಂತಲೇ ಹೇಳಬಹುದಾಗಿದೆ. ಗ್ರಾಮೀಣ ಕಲೆಗಳಿಗೆ ಇಂದು ಅತ್ಯಂತ ಬೇಡಿಕೆ ಇದ್ದು ಅದರಲ್ಲೂ ಸಂಗೀತಕ್ಕೆ ಹೆಚ್ಚು ಬೇಡಿಕೆ ಇದೆ. ಇಂದು ಭಾರತ ಮಾತ್ರವಲ್ಲದೇ ವಿಶ್ವದ ಇತರ ರಾಷ್ಟ್ರಗಳು ಕೂಡ ಭಾರತೀಯ ಗ್ರಾಮೀಣ ಸಂಗೀತಕ್ಕೆ ಮನಸೋತಿದ್ದು, ಇಲ್ಲಿಯ ಗ್ರಾಮೀಣ ಸಂಗೀತ ಕಲಾವಿದರನ್ನು ತಮ್ಮ ರಾಷ್ಟ್ರಗಳಿಗೆ ಆಮಂತ್ರಿಸುತ್ತಿದುದು ಒಳ್ಳೆಯ ಬೆಳವಣಿಗೆಯಾಗಿದೆ. ಇದರಿಂದ ಗ್ರಾಮೀಣ ಯುವಕರಲ್ಲಿ ಸಂಗೀತ ಬಗ್ಗೆ ಸದಭಿರುಚಿ ಹಾಗೂ ಉತ್ಸಾಹ ಹೆಚ್ಚಾಗುತ್ತಿದ್ದುದು ಕಂಡುಬಂದಿದೆ.

ಇಂದು ಗ್ರಾಮೀಣ ಭಾಗದಲ್ಲಿ ಟ್ರ್ಯಾಕ್ಟರಗಳ ಬಳಕೆ ಸರ್ವೆಸಾಮಾನ್ಯವಾಗಿದೆ. ಈ ಟ್ರ್ಯಾಕ್ಟರಗಳಲ್ಲಿ ಸೌಂಡಬಾಕ್ಸ್ ಅಳವಡಿಸಿ ಎಲೆಕ್ಟ್ರಾನಿಕ್ ಸಂಗೀತ ಉಪಕರಣವನ್ನು ಜೋಡಿಸಿ ಅದರಲ್ಲಿ ಜಾನಪದ ಹಾಡುಗಳನ್ನು ಹಚ್ಚಿ ಕೇಳುವದು ಹಳ್ಳಿಗರಲ್ಲಿ ಹೆಚ್ಚಾಗಿದ್ದು, ಇದು ಸಹಜವಾಗಿಯೇ ಸಂಗೀತದ ಕುರಿತು ಅಭಿರುಚಿ ಬೆಳೆಯುವದಕ್ಕೆ ಸಹಾಯಕಾರಿಯಾಗಿದೆ ಎಂದು ಹೇಳಬಹುದು.

ಜಾತ್ರೆಗಳು ನಡೆಯುವ ಸಂದರ್ಭದಲ್ಲಿ ಭಜನಾ ಸ್ಪರ್ಧೆಗಳನ್ನು ಏರ್ಪಡಿಸುತ್ತಾರೆ. ಇದು ಕೂಡ ಅವರಲ್ಲಿ ಸಂಗೀತದ ಕಡೆಗೆ ಆಸಕ್ತಿ ಮೂಡಿಸುವಲ್ಲಿ ಯಶಸ್ವಿ ಪ್ರಯೋಗವಾಗಿದೆ. ಮತ್ತು ಸಂಗೀತದ ಕುರಿತು ಒಂದು ಒಳ್ಳೆ ಸದಭಿರುಚಿ ಬೆಳೆದಿದೆ ಎಂದೆ ಹೇಳಬಹುದು.

# ಸಮಾರೋಪ
# Conclusion

ಹಳ್ಳಿಗಳಲ್ಲಿ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ ಕುರಿತು ಜಾಗೃತಿ ಮತ್ತು ಪ್ರೇರಣೆ ಕುರಿತು ನಾನು ತೆಗೆದುಕೊಂಡ ಈ ಕಿರು ಸಂಶೋಧನೆಯು ನನಗೆ ಅತ್ಯಂತ ಸಂತೋಷವನ್ನುಂಟುಮಾಡಿದೆ. ಈ ಸಂತೋಷಕ್ಕೆ ಕಾರಣವೆಂದರೆ ನಾನು ಹಳ್ಳಿಗಳಿಗೆ ಹೋದಾಗ ಅಲ್ಲಿಯ ಹಿರಿಯರು ಕಿರಿಯರು ನನ್ನನ್ನು ಅತ್ಯಂತ ಆತ್ಮೀಯುತೆಯಿಂದ ಬರಮಾಡಿಕೊಂಡು ಗೌರವನೀಡಿ ಎಲ್ಲರೀತಿಯಿಂದಲೂ ಸಹಕಾರ ನೀಡಿದ್ದಾರೆ. ಈ ಉದ್ದೇಶಕ್ಕೆ ಬಳಸಿಕೊಳ್ಳಲು ದೇವಸ್ಥಾನಗಳಲ್ಲಿ ಜಾಗಕೊಟ್ಟಿದ್ದಾರೆ. ಅಷ್ಟೇ ಮುಖ್ಯವಾಗಿ ಗ್ರಾಮಸ್ಥರು ಅಲ್ಲಿ ಕುಳಿತುಕೊಂಡು ಶಾಸ್ತ್ರೀಯ ಸಂಗೀತವನ್ನು ಆಲಿಸಿದ್ದಾರೆ. ಕಲಿಯುವ ಆಸೆಯನ್ನು ವ್ಯಕ್ತಪಡಿಸಿದ್ದಾರೆ.

ನಾನು ಹಲವಾರು ಭಾರಿ ಉಣಕಲ್, ಬೈರಿದೇವರಕೊಪ್ಪ, ಗಾಮನಗಟ್ಟಿ ಗ್ರಾಮಗಳಿಗೆ ಭೇಟಿನೀಡಿ ಶಾಸ್ತ್ರೀಯ ಸಂಗೀತದ ಮತ್ತು ತತ್ವಗೀತೆಗಳ ಕಾರ್ಯಕ್ರಮ ನೀಡಿ ಅವರಲ್ಲಿ ಸಂಗೀತದ ಕುರಿತು ಅರಿವು ಮತ್ತು ಪ್ರೇರಣೆ ನೀಡಿದ್ದೇನೆ. ಸಂಗೀತದ ಬಗ್ಗೆ ಮಾಹಿತಿಯನ್ನು ಒದಗಿಸುವ ಕರಪತ್ರಗಳನ್ನು ಹಂಚಿದ್ದೇನೆ. ನಾನು ಕೂಡ ವಿವರಿಸಿ ಹೇಳಿದ್ದೇನೆ. ಗಾಮನಗಟ್ಟಿಯಲ್ಲಿ ಇರುವ ಎರಡು ವೃದ್ಧಾಶ್ರಮಗಳಿಗೆ ಭೇಟಿನೀಡಿ ಅಲ್ಲಿಕೂಡ ಕಾರ್ಯಕ್ರಮ ನೀಡಿದಾಗ ಅವರೆಲ್ಲ ಸಂಗೀತದ ಕುರಿತು ಬಹಳ ಆಸಕ್ತಿಯನ್ನು ತೋರಿದ್ದು ನಿಜಕ್ಕೂ ಸಂತೋಷವನ್ನು ಕೊಟ್ಟಿತು.

ಭೈರಿದೇವರಕೊಪ್ಪ ಗ್ರಾಮದೇವತೆಯ ಗುಡಿಯಲ್ಲಿ ಹಾಡಿದಾಗ ಮಕ್ಕಳು ಕೂಡ ಬಂದು ಕೂತಿದ್ದು, ಅವರಲ್ಲಿಯು ಆಸಕ್ತಿಯುನ್ನು ನೋಡಿ

ಸಂತೋಷವಾಯಿತು. ಉಣಕಲ್ ಗ್ರಾಮದಲ್ಲಿ ಪೂಜ್ಯ ಸಿದ್ಧಪ್ಪಜ್ಜನ ಗುಡಿಯಲ್ಲಿ ಹಲವಾರು ಸಲ ಶಾಸ್ತ್ರೀಯ ಸಂಗೀತದ ಕಾರ್ಯಕ್ರಮಗಳನ್ನು ನೀಡಿದಾಗ ಅವರ ಪ್ರೇರಣೆ ಪಡೆದು ಇನ್ನಷ್ಟು ಕಾರ್ಯಕ್ರಮಗಳನ್ನು ಕೊಡಲು ತಿಳಿಸಿದ್ದು ನೋಡಿ ಹಿರಿಯರು ಕೂಡ ಎಷ್ಟೊಂದು ಶಾಸ್ತ್ರೀಯ ಸಂಗೀತದ ಕಡೆಗೆ ಒಲವು ತೋರಿಸುತ್ತಿದ್ದುದು ಆಶ್ಚರ್ಯವನ್ನುಂಟುಮಾಡಿತು.

ಒಟ್ಟಾರೆ ಹೇಳುವದಾದರೆ ಹಳ್ಳಿಗರಲ್ಲಿ ಸಹಜವಾಗಿಯೆ ಸಂಗೀತದ ಕುರಿತು ಆಸಕ್ತಿ ಒಲವು ಇದ್ದು ಅದಕ್ಕೆ ಬೇಕಾದ ವಾತಾವರಣ ಮತ್ತು ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದ ಕಲಿಕಾ ಕೇಂದ್ರಗಳನ್ನು ಸರಕಾರದಿಂದ ತೆಗೆದಲ್ಲಿ ಅಲ್ಲಿಯ ಯುವಕರಿಗೆ ಕಲಿಯಲು ಒಂದು ಒಳ್ಳೆಯ ಅವಕಾಶ ಮಾಡಿಕೊಟ್ಟಂತಾಗುತ್ತದೆ ಎಂದು ಹೇಳುಬಹುದು.

# ಆಕರ ಗ್ರಂಥಗಳು

## Referance Books


1) ಶ್ರೋತೃವಿಗೆ ಅರಿವು – ಡಾ॥ ಪ್ರಭಾ ಅತ್ರೆ

ಕನ್ನಡಕ್ಕೆ – ಸದಾನಂದ ಕನವಳ್ಳಿ

2) ಶೃತಿಲಯ – ಶೃತಿ ಭಟ್

3) ಕಲೆ ಎಂದರೇನು – ಲಿಯೋಟಾಲ್‌ಸ್ಟಾಯ್

ಕನ್ನಡಕ್ಕೆ – ಸಿ.ಪಿ.ಕೆ.

4) ಸಂಗೀತ ಸಂವಾದ – ಭಾಸ್ಕರ ಚಂದಾವರ್‌ಕರ

ಕನ್ನಡಕ್ಕೆ – ವೈದೇಹಿ

5) Music Essays On Indian Music - Josef Kuckertz

Ed. Sdina Thielemann

6) Sources & Reaserch in Indian Classical Music - Reena Gautam

7) A Guide to Indian Music - Km N. Lalita


*****

# ಗ್ರಾಮೀಣ ಭಾಗದಲ್ಲಿ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದ ಅರಿವು ಮತ್ತು ಪ್ರೇರಣೆ

## ಕಿರು ಸಂಶೋಧನಾ ಪ್ರೋಜೆಕ್ಟ

**ಅರ್ಪಣೆ**

**ವಿಶ್ವವಿದ್ಯಾಲಯದ ಧನ ಸಹಾಯ ಆಯೋಗ**

**ಇಂದ**

**ಪ್ರೋ. ರವೀಂದ್ರ ಜಕಾತಿ**

**ಖ್ಯಾಲ ವಿಭಾಗ,**

**ಪಿ.ಪಿ.ಜಿ. ಸಂಗೀತ ಮಹಾವಿದ್ಯಾಲಯ,**

**ಗದಗ- ೫೮೨ ೧೦೧**

**ಕರ್ನಾಟಕ ರಾಜ್ಯ**

**೨೦೧೫**

# ಪರಿವಿಡಿ
# CONTENTS


| ಅ. ನಂ. | ಅಧ್ಯಾಯದ ಹೆಸರು | ಪುಟ ಸಂಖ್ಯೆ |
|---|---|---|
| | ಸಾರಲೇಖ | 3 |
| | ಸಂಶೋಧನಾ ಕಿರುಚಿತ್ರ | 7 |
| | ಪರಿಚಯ | 8 |
| 1 | ಅಧ್ಯಾಯ–1<br>ಗ್ರಾಮೀಣ ಭಾಗದಲ್ಲಿ ಹಿಂದುಸ್ತಾನಿ ಸಂಗೀತದ ಅರಿವು ಮತ್ತು ಪ್ರೇರಣೆ | 9 |
| 2 | ಅಧ್ಯಾಯ–2<br>ಗ್ರಾಮೀಣ ಭಾಗದಲ್ಲಿ ಸಂಗೀತದ ಹಿನ್ನಲೆ | 26 |
| 3 | ಅಧ್ಯಾಯ–3<br>ಗ್ರಾಮೀಣ ಜನರಲ್ಲಿ ಸಂಗೀತದ ಅಭಿರುಚಿ | 27 |
| | ಸಮಾರೋಪ | 29 |
| | ಆಕರ ಗ್ರಂಥಗಳು | 31 |
| | ಫೋಟೋ ಮತ್ತು ಹಳ್ಳಿಗರ ಅಭಿಪ್ರಾಯಗಳು | 33 |